

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 Issue : 50 Sunday 27-10-2024 E-mail : maruti.b.hosamani76@gmail.com Page: 4 Price : Rs. 1/-


## ವರುಣನ ಆರ್ಭಟಕ್ಕೆ ಬೆಳೆ ನಾಶ, ವಾಹನ ಸಂಚಾರ ಅಸ್ತವ್ಯಸ್ತ, ಸಾರ್ವಜನಿಕರ-ಗೋಳು ಕೇಳೋರ್ಯಾರು....?



**ಸಿಹಿ ಕಹಿ ಸುದ್ದಿ,**

**ಕೊಟ್ಟೂರು** : ಪಟ್ಟಣದ ಸನ್ನಿಧಿ ಕಾಲೇಜ್ ಮುಂಭಾಗ ನರಕ ಯಾತನೆ ಅನುಭವಿಸುತ್ತಿರುವ ವಾಹನ ಚಾಲಕರು, ಜೀವ ಕೈಯಲ್ಲಿ ಹಿಡಿದು ಸಂಚಾರ ನಡೆಸುತ್ತಿರುವ ಇಲ್ಲಿನ ಸಾರ್ವಜನಿಕರು ಸಂಬಂಧಪಟ್ಟ ಶಾಸಕರಿಗೂ ಹಾಗೂ ಇಲ್ಲಿನ ಅಧಿಕಾರಿಗಳಿಗೂ ಇಡೀ ಶಾಪ ಹಾಕುತ್ತಿದ್ದಾರೆ. ಆದರೆ ಇಲ್ಲಿನ ಅಧಿಕಾರಿಗಳು ಜಾಣ ಕುರುಡರಂತೆ ಕಂಡರೂ ಕಾಣದಂತೆ ತಿಳಿದರೂ ತಿಳಿಯದಂತೆ ದಿನ ನಿತ್ಯ ನಿರ್ಲಕ್ಷತನವೇ ಎದ್ದು ಕಾಣುತ್ತದೆ. ಈ ಅಕಾಲಿಕ ಮಳೆಯಿಂದ ರೈತರು ಬೆಳೆದ ಬೆಳೆಗಳು ನೆಲಕಚ್ಚಿ ರೈತರಿಗೆ ಆಕಾಶವೇ ಕಳಚಿ ಬಿದ್ದಂತಾಗಿದೆ, ರೈತರು ಸಾಲ ಶೂಲ ಮಾಡಿ ಹೇಗೋ ಅಲ್ಪ ಸಲ್ಪ ಮೆಕ್ಕೆಜೋಳ ಈರುಳ್ಳಿ ರಾಗಿ ಮುಂತಾದ ದವಸಗಳನ್ನು ಕೊಂಡ್ಕೋಯ ಬೇಕಾದರೆ ಕೊಟ್ಟೂರು ಪಟ್ಟಣದ ರಸ್ತೆಗಳ ಗುಂಡಿಗಳಿಂದ ಬೇಸತ್ ಹೋಗಿದ್ದಾರೆ ಇದಕ್ಕೆ ಕಾರಣ ಇಲ್ಲಿನ ಅಧಿಕಾರಿಗಳ ನಿರ್ಲಕ್ಷ್ಯತನವೇ ಆಗಿದೆ. ಇವರಿಗೆ ತಕ್ಕ ಪಾಠ ಕಲಿಸ ಬೇಕಾದ ಶಾಸಕರೇ ನೀವೇನು ಮಾಡುತ್ತಿದ್ದೀರಿ? ಹೆಸರಿಗೆ ಮಾತ್ರ ನೂತನ ತಾಲೂಕು ಕೊಟ್ಟೂರು ಆದರೆ ದಿನೇ ದಿನೇ ಸೋಲಾರ್ ಪ್ಲಾಂಟ್ ರಿಯಲ್ ಎಸ್ಟೇಟ್ ಹಾಗೂ ವಿಂಡೋ ಫ್ಯಾನ್ ಹೀಗೆ ಹಲವಾರು ಕಂಪನಿಗಳ

ಕಾಟದಿಂದ ಮುಂದುವರಿತ್ತಲೇ ಬಂದಿದೆ ಆದರೆ ಕೊಟ್ಟೂರು ಪಟ್ಟಣದ ಸುತ್ತ ಮುತ್ತಲಿನ ರಸ್ತೆಗಳ ಕಥೆ ವ್ಯಥೆಗಳಾಗಿವೆ, ವರುಣನ ಆರ್ಭಟಕ್ಕೆ ಬೆಳೆಗಳು ನಾಶವಾಗಿ ರಸ್ತೆಗಳ ಸಂಚಾರ ಸ್ಥಗಿತ ಗೊಂಡಿವೆ. ಕೊಟ್ಟೂರುಗೆ ಸಂಬಂಧಪಟ್ಟ ಶಾಸಕರುಗಳಾದ ಕೆ ನೇಮಿರಾಜ್ ನಾಯ್ಕ್ ಹಗರಿಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರ ಮತ್ತು ಎನ್.ಟಿ ಶ್ರೀನಿವಾಸ್ ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರ ಸಾರ್ವಜನಿಕರಲ್ಲಿ ಮತ ಹಾಕಿಸಿ ಕೊಂಡು ಗೆದ್ದು ಕೇವಲ ಪ್ರಚಾರ ಪ್ರಿಯರಾಗಿದ್ದಾ-ರೆ ಅಭಿವೃದ್ಧಿಯಲ್ಲಿ ಶೂನ್ಯ. ಪ್ರಚಾರ-ಕ್ಕೆ ಬೇಕಾಗಿರುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮನ ಬಂದಂತೆ ಕುಣಿದು ಕುಪ್ಪಳಿಸುವುದು ನೋಡುವುದಾಗಿದೆ. ನಮ್ಮ ಪಾಡು ಕೇಳುವವರ್ಯಾರು ಎಂದು ಇಲ್ಲಿನ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು. ಆದರೆ ಸುಮಾರು ದಿನಗಳಿಂದ ಸುರಿದ ಮಳೆಗೆ ಬೆಳೆಗಳು ನಾಶವಾಗಿವೆ ಮತ್ತು ಕೊಟ್ಟೂರು ಪಟ್ಟಣದ ಸುತ್ತಲೂ ರಸ್ತೆಗಳು ಗುಂಡಿಗಳಾಗಿವೆ ಇಲ್ಲಿನ ಅಧಿಕಾರಿಗಳು ಹಾಗೂ ಜನನಾಯಕರಾಗಲಿ ಎಚ್ಚೆತ್ತು ಕೊಳ್ಳಬೇಕು ಇಲ್ಲವಾದರೆ ರಸ್ತೆಗಳನ್ನು ಬಂದು ಮಾಡಿ ಉಗ್ರವಾದ ಹೋರಾಟ ಮಾಡುತ್ತೇವೆ ಎಂದು ರೈತ ಮುಖಂಡರಾದ ಜೈಪ್ರಕಾಶ್ ನಾಯಕ್ ಹಾಗೂ ರೈತ ಸಂಘದ ಕೊಟ್ಟೂರು ತಾಲೂಕು ಸಮಿತಿಯ ಕಾರ್ಯದರ್ಶಿ ಗುಡಿಯರ್ ಮಲ್ಲಿಕಾರ್ಜುನ್ ತಿಳಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್.ಕುಮಾರ್.ಸಿ. ಕೊಟ್ಟೂರು**

## ಯಲಗೋಡದಲ್ಲಿ ಬೆಳ್ಳಂ ಬೆಳಿಗ್ಗೆಯೇ ಜೆಸಿಬಿ ಸದ್ದು

**ಸಿಹಿ ಕಹಿ ಸುದ್ದಿ**

**ಯಲಗೋಡ** : ದೇವರ ಹಿಪ್ಪರಗಿ ತಾಲ್ಲೂಕಿನ ಯಲಗೋಡ ಗ್ರಾಮದಲ್ಲಿ ಬಸ್ ನಿಲ್ದಾಣ ದಿಂದ ತಾಂಡಾಕ್ಕೆ ಹೋಗುವ ರಸ್ತೆಯನ್ನು ಒತ್ತುವರಿ ಮಾಡಿ ಚರಂಡಿ ಮೇಲೆ ಮನೆ ಹಾಗೂ ಅಂಗಡಿಗಳನ್ನು ಕಟ್ಟಿದ್ದಾರೆ, ಬಸ್ ಹಾಗೂ ಇನ್ನಿತರ ವಾಹನಗಳಿಗೆ, ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆ ಆಗಿತ್ತು, ಆದರೆ ಗ್ರಾಮ ಪಂಚಾಯತಿ ಯವರು ಮೂರು ಸಲ ನೋಟಿಸ್ ನೀಡಿದರು, ಚರಂಡಿ ಮೇಲಿನ ಅಂಗಡಿಯವರು ಹಾಗೂ ಮನೆ ಯವರು ತಗೆದಿಲ್ಲ, ಇಂದು ಬೆಳ್ಳಗೆ ಗ್ರಾಮ ಪಂಚಾಯತಿ ಅಭಿವೃದ್ಧಿಅಧಿಕಾರಿಗಳಾದ. ಶಿವಾನಂದ ಹಡಪದ, ಹಾಗೂ ಅವರ ಸಿಬ್ಬಂದಿಗಳು, ಗ್ರಾಮ ಪಂಚಾಯತಿ ಅಧ್ಯಕ್ಷರಾದ, ಮಹಮದ್ ರಫೀಕ್ ಕಣಮೇಶ್ವರ, ಸದಸ್ಯರಾದ ಹುಸೇನ್ ತಳ್ಳೊಳ್ಳಿ, ರಾಜಪಟೇಲ್ ಕಣಮೇಶ್ವರ, ಗುರುನಾಥ ರಾಠೋಡ ಮಶ್ಯಾಕ ನಧಾಪ್ ಗ್ರಾಮದ ಮುಖಂಡರಾದ, ದೇವೇಂದ್ರ



ಮಾದರ,ಮಾಂತೇಶ,ಕೊಟನೂರ,ಮಾಂತೇಶ ತಳ್ಳೊಳ್ಳಿ, ಲಾಲಸಿಂಗ್, ಚವ್ಹಾಣ, ಸಂತೋಷ ರಾಠೋಡ ಪರಸುರಾಮ ರಾಠೋಡ ಹಾಗೂ ಸಾರ್ವಜನಿಕರು ಮತ್ತು ಕಲಕೇರಿ ಪೋಲಿಸ್ ಠಾಣೆಯ ಸಿಬ್ಬಂದಿ ವರ್ಗದವರ ಸಮ್ಮುಖದಲ್ಲಿ, ಚರಂಡಿ ಮೇಲಿನ ಎಲ್ಲಾ ಅಂಗಡಿಗಳು, ಮನೆಗಳು, ಜೆಸಿಬಿ ಮುಖಾಂತರ ತೆಗೆದು ಹಾಕಿದರು,ಗ್ರಾಮದ ಬಸ್ ನಿಲ್ದಾಣ ಹತ್ತಿರ ಹೆಣ್ಣು ಮಕ್ಕಳಿಗೆ ಕೂಡಲಿಕ್ಕೆ ಜಾಗ ಇಲ್ಲದಂತೆ ಆಗಿತ್ತು, ಗ್ರಾಮ ಪಂಚಾಯತಿ ಯವರು ಇದು ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ಸಾರ್ವಜನಿಕರು ಸಂತೋಷ ವ್ಯಕ್ತಪಡಿಸಿದರು, ಇನ್ನೂ ಮುಂದೆ ಗ್ರಾಮದಲ್ಲಿನ ಎಲ್ಲಾ ರಸ್ತೆಗಳನ್ನು ಒತ್ತುವರಿ ಮಾಡಿದವರಿಗೆ, ಇದೇ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅಭಿವೃದ್ಧಿ ಅಧಿಕಾರಿಗಳು ಹೇಳಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ.ಹಚ್ಯಾಳ.ದೇವರ ಹಿಪ್ಪರಗಿ**

## ಜಂಗಮ ಸಮಾಜ ಸಂಸ್ಥೆ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ

**ಸಿಹಿ ಕಹಿ ಸುದ್ದಿ**

**ಕೂಡ್ಲಿಗಿ**:ಜಂಗಮ ಸಮಾಜ ಸಂಸ್ಥೆ,(ರಿ)ಕೂಡ್ಲಿಗಿ ವತಿಯಿಂದ ಅ, 27 ರಂದು ಭಾನುವಾರ ಬೆಳಿಗ್ಗೆ 10:30 ಕ್ಕೆ ಜಂಗಮ ಸಮಾಜ ಸಂಸ್ಥೆ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಖಾನಾ ಹೊಸಹಳ್ಳಿ ಪಟ್ಟಣದ ಗಾಣಿಗರ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ಜಂಗಮ ಸಮಾಜ ಸಂಸ್ಥೆಯ ಅಧ್ಯಕ್ಷರು ತಿಳಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ತಾಲೂಕು ಜಂಗಮ ಸಮಾಜ ಸಂಸ್ಥೆ ಉದ್ಘಾಟನೆ ಮತ್ತು ಪ್ರತಿಭಾ ಪುರಸ್ಕಾರ, ಗಣ್ಯರಿಗೆ ಸನ್ಮಾನಿಸಿ ಗೌರವಿಸಲಾಗುತ್ತದೆ. ಕಾರ್ಯಕ್ರಮದ ಸಾನಿಧ್ಯವನ್ನು ಶೀ ಮ.ನಿ.ಪ್ರ ಶಂಕರ ಸ್ವಾಮಿಗಳು, ಕ್ರಿಯ ಮೂರ್ತಿಗಳು, ಮಹಲ್ ಮಠ, ಕೊಟ್ಟೂರು ಇವರು ಸಾನಿಧ್ಯವನ್ನು ವಹಿಸುವರು. ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಡಾ, ಶ್ರೀನಿವಾಸ್ ಎನ್.ಟಿ. ಅವರು ಉದ್ಘಾಟಿಸುವರು, ಎಚ್.ಎಂ ಗಂಗಾಧರ ಸ್ವಾಮಿ ಅಧ್ಯಕ್ಷರು ತಾಲೂಕು ಜಂಗಮ ಸಮಾಜ ಸಂಸ್ಥೆ ಕೂಡ್ಲಿಗಿ,

ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ಕೆ.ಎಂ ಶಶಿಧರ್ ಸ್ವಾಮಿ ಮಾಜಿ ಜಿ.ಪಂ ಸದಸ್ಯರು, ಐ.ದಾರುಕೇಶ್ ಉಪಾಧ್ಯಕ್ಷರು ಬಿಡಿಸಿಸಿ ಬ್ಯಾಂಕ್ ಹೊಸಪೇಟೆ, ಕೆ.ಎಂ ವೀರೇಶ್ ಕಾರ್ಯದರ್ಶಿ ಬಾಪೂಜಿ ವಿದ್ಯಾ ಸಂಸ್ಥೆ ಚಿತ್ರದುರ್ಗ, ಕೆ.ಎಂ ಮಂಜಕ್ಕ ಗ್ರಾ.ಪಂ ಸದಸ್ಯರು ಹೊಸಹಳ್ಳಿ, ಚಿದಾನಂದ ಸ್ವಾಮಿ ನಿವೃತ್ತ ಬಿಡಿಸಿಸಿ ಬ್ಯಾಂಕ್ ಸೂಪರಿಟೆಂಡೆಂಟ್, ವೈ ಎಂ ವೀರೇಶ್ವರಯ್ಯ ಅಧ್ಯಕ್ಷರು ಆರ್.ಎಸ್. ಎಸ್.ಎನ್ ಇಮಾಡಪುರ, ಕಾಶೀನಾಥಯ್ಯ ಜಿಲ್ಲಾಧ್ಯಕ್ಷರು ಜಂಗಮ ಸಮಾಜ ಸಂಸ್ಥೆ ವಿಜಯನಗರ, ಎಂ.ಒ ಮಂಜುನಾಥಯ್ಯ ಜಿಲ್ಲಾ ಉಪಾಧ್ಯಕ್ಷರು, ಮುಖ್ಯ ಭಾಷಣಕಾರರು ಎನ್.ಎಂ ರವಿಕುಮಾರ್ ಕವಿಗಳು, ಸಾಹಿತಿಗಳು ಎಂ.ಬಿ ಅಯ್ಯನಹಳ್ಳಿ, ಸೇರಿದಂತೆ ಜಂಗಮ ಸಮಾಜ ಸಂಸ್ಥೆಯ ತಾಲೂಕಿನ ಕಾರ್ಯದರ್ಶಿ, ಪದಾಧಿಕಾರಿಗಳು ಮತ್ತು ಜಂಗಮ ಸಮಾಜದ ಬಂಧುಗಳು, ಇತರೆ ಸಮುದಾಯದ ಮುಖಂಡರು ಭಾಗವಹಿಸುವರು ಎಂದರು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್.ಕೆ.ಹೊಸಹಳ್ಳಿ**

## ಭುವನೇಶ್ವರಿ ಅಮ್ಮನವರ ಅಂಬಾರಿ ಉತ್ಸವಕ್ಕೆ ಆಹ್ವಾನ



**ಬಾಗಲಕೋಟೆ** : ಮೈಸೂರಿನಂತೆ ಅಂಬಾರಿ ಉತ್ಸವ ನಡೆಯುವ ಉತ್ತರ ಕರ್ನಾಟಕದ ಏಕೈಕ ಅಂಬಾರಿ ಉತ್ಸವ ಕುಂದರಗಿಯ ಸುರಗಿರಿ ಬೆಟ್ಟದ ಭುವನೇಶ್ವರಿ ಅಮ್ಮನವರ ಅಂಬಾರಿ ಉತ್ಸವಕ್ಕೆ ಖ್ಯಾತ ಚಲನಚಿತ್ರ ನಿರ್ಮಾಪಕ ಘಣಶ್ಯಾಂ ಭಾಂಡಗೆ ಅವರಿಗೆ ದೇವಸ್ಥಾನ ಕಮೀಟಿ ವತಿಯಿಂದ ವಿಶೇಷ ಆಹ್ವಾನ ನೀಡಲಾಯಿತು.

ನವ್ಹೆಂಬರ 6 ರಿಂದ 3 ದಿನಗಳ ಕಾಲ ನಡೆಯಲಿರುವ ಅಂಬಾರಿ ಉತ್ಸವಕ್ಕೆ ಭುವನೇಶ್ವರಿ ಅಮ್ಮನವರ ಆಜ್ಞೆಯಂತೆ ಭಾಂಡಗೆ ಯವರಿಗೆ ಸಾಂಪ್ರದಾಯಿಕವಾಗಿ ಆಹ್ವಾನ ನೀಡಲು ಬಂದಿರುವುದಾಗಿ ದೇವಸ್ಥಾನದ ಅರ್ಚಕರಾದ ಲಕ್ಷ್ಮಣ ಶರಣರು ತಿಳಿಸಿದರು. ನವನಗರದ ಭಾಂಡಗೆ ಅವರ ನಿವಾಸಕ್ಕೆ ಆಗಮಿಸಿದ ದೇವಸ್ಥಾನ ಕಮೀಟಿಯವರಿಗೆ ಭಾಂಡಗೆ ಪರಿವಾರದವರು ರಸ್ತೆಯುದ್ದಕ್ಕೂ ರಂಗೋಲಿ ಬಿಡಿಸಿ ಹೂವಿನ ಮಳೆ ಗೈದರು. ಈ ಸಂದರ್ಭದಲ್ಲಿ ದೇವಸ್ಥಾನ ಕಮೀಟಿಯವರು, ಸ್ಥಳೀಯ ಗಣ್ಯರು ಪಾಲ್ಗೊಂಡಿದ್ದರು.

**ಉತ್ತರ ಕರ್ನಾಟಕದಲ್ಲಿ ಅದ್ದೂರಿಯಾಗಿ ಜರುಗುವ ಅಂಬಾರಿ ಉತ್ಸವದಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿರುವುದು ನನ್ನ ಪೂರ್ವ ಜನ್ಮದ ಪುಣ್ಯ.**

**- ಘಣಶ್ಯಾಂ ಭಾಂಡಗೆ**
**ಖ್ಯಾತ ಚಲನಚಿತ್ರ ನಿರ್ಮಾಪಕ**

## ಡೆಂಟಲ್ ಕಾಲೇಜಿನಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ

## ಚರಂತಿಮಠರಿಂದ ವೈದ್ಯಕೀಯ ಸಂಸ್ಥೆಗಳ ಸಾಮ್ರಾಜ್ಯ ನಿರ್ಮಾಣ: ಅಶೋಕ ಸಜ್ಜನ

**ಬಾಗಲಕೋಟೆ** : ಬಿ.ವಿ.ವಿ ಸಂಘದ ಪಿ.ಎಮ್.ಎನ್.ಎಮ್ ದಂತ ಮಹಾವಿದ್ಯಾಲಯ ರಾಜ್ಯದ ಪ್ರತಿಷ್ಠಿತ ಡೆಂಟಲ್ ಕಾಲೇಜು ಎನ್ನುವ ಗೌರವಕ್ಕೆ ಪಾತ್ರವಾಗಿದೆ. ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅಗತ್ಯವಾದ ಎಲ್ಲ ಸೌಕರ್ಯಗಳನ್ನು ಒದಗಿಸಲಾಗಿದೆ. ಡೆಂಟಲ್ ಆಸ್ಪತ್ರೆ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಎಲ್ಲ ಬೆಳವಣಿಗೆಗಳ ಹಿಂದಿನ ರೂವಾರಿ ಬಿ.ವಿ.ವಿ ಸಂಘದ ಮಾನ್ಯಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಅವರು. ಉತ್ತರ ಕರ್ನಾಟಕದಲ್ಲಿ ವೈದ್ಯಕೀಯ ಸಂಸ್ಥೆಗಳ ಸಾಮ್ರಾಜ್ಯವನ್ನು ನಿರ್ಮಾಣ ಮಾಡಿದ ಶ್ರೇಯಸ್ಸು ಡಾ.ವೀರಣ್ಣ ಚರಂತಿಮಠ ಅವರಿಗೆ ಸಲ್ಲುತ್ತದೆ ಎಂದು ಬಿ.ವಿ.ವಿ ಸಂಘದ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್.ಸಜ್ಜನ (ಬೇವೂರ) ಹೇಳಿದರು.

ದಿನಾಂಕ 21.10.2024 ರಂದು ಬಿ.ವಿ.ವಿ ಸಂಘದ ದಂತ ವೈದ್ಯಕೀಯ ಮಹಾವಿದ್ಯಾಲಯದಲ್ಲಿ 2024-25 ನೇ



ಸಾಲಿನ ಬಿ.ಡಿ.ಎಸ್ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳ ಜವಾಬ್ದಾರಿ ಸಂಸ್ಥೆಗೆ ಸೇರಿದ್ದು. ಪಾಲಕರು ಚಿಂತೆ ಮಾಡುವ ಅಗತ್ಯವಿಲ್ಲ. ಡೆಂಟಲ್ ಕಾಲೇಜಿನಲ್ಲಿ ಶಿಸ್ತು, ಶಿಕ್ಷಣದ ಗುಣಮಟ್ಟ ಮತ್ತು ವಿದ್ಯಾರ್ಥಿಗಳ ಕುರಿತಾದ ಕಾಳಜಿಗೆ ಮಹತ್ವ ನೀಡಲಾಗುತ್ತಿದೆ. ಓದಿಗೆ ಪ್ರಾಮುಖ್ಯತೆ ನೀಡಿ ವೃತ್ತಿಯಲ್ಲಿ ಶ್ರೇಷ್ಠವಾದದ್ದನ್ನು ಸಾಧಿಸಿ ಎಂದು ನುಡಿದರು. ಕಾರ್ಯಕ್ರಮದಲ್ಲಿ ಅತಿಥಿಯಾಗಿ ಮಾತನಾಡಿದ ಹಾಸ್ಟೆಲ್ ಕಮೀಟಿ ಕಾರ್ಯಾಧ್ಯಕ್ಷ ಕುಮಾರಸ್ವಾಮಿ ಹಿರೇಮಠ (ಚಿತ್ತರಗಿ) ಅವರು ವಸತಿ ನಿಲಯದ ಸೌಲಭ್ಯಗಳು ಮತ್ತು ಕ್ರೀಡಾ ಸೌಲಭ್ಯಗಳ ಕುರಿತು ಹೇಳಿದರು.

ಪ್ರಾಚಾರ್ಯ ಡಾ.ಶ್ರೀನಿವಾಸ ವನಕಿ ಅತಿಥಿಗಳನ್ನು ಮತ್ತು ವಿದ್ಯಾರ್ಥಿಗಳನ್ನು ಸ್ವಾಗತಿಸಿ ಕಾಲೇಜಿನ ಬೆಳವಣಿಗೆ ಕುರಿತು ಪ್ರಾಸ್ತಾವಿಕ ಮಾತನಾಡಿದರು. ಪ್ರಥಮ ವರ್ಷದ ಎಲ್ಲ ವಿಭಾಗಗಳ ಮುಖ್ಯಸ್ಥರಿಂದ ವಿದ್ಯಾರ್ಥಿಗಳಿಗೆ ಪ್ರಥಮ ವರ್ಷದ ವಿಭಾಗಗಳ ಪರಿಚಯ ಮಾಡಿಕೊಡಲಾಯಿತು. ಡಾ.ಜ್ಯೋತಿ ಪಟ್ಟಣಶೆಟ್ಟಿ ಮತ್ತು ಡಾ.ಭೀಮಪ್ಪ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳು ಪಾಲಿಸಬೇಕಾದ ನಿಯಮಗಳನ್ನು ತಿಳಿಸಿದರು.

ಡಾ.ಭಾಗ್ಯಶ್ರೀ ವನಕಿ ನಿರೂಪಿಸಿದ ಕಾರ್ಯಕ್ರಮ ಡಾ.ಮಹೇಶ ಹಿರೇಗೌಡರ ಅವರ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು. ಸಮಾರಂಭದಲ್ಲಿ ಮಹಾವಿದ್ಯಾಲಯದ ಎಲ್ಲ ವಿಭಾಗಳ ವೈದ್ಯ ಸಿಬ್ಬಂದಿ, ಬೋಧಕೇತರ ಸಿಬ್ಬಂದಿ, ಪ್ರಥಮ ವರ್ಷದ ವಿದ್ಯಾರ್ಥಿಗಳು ಮತ್ತು ಪಾಲಕರು ಪಾಲ್ಗೊಂಡಿದ್ದರು.

## ಕೃಷ್ಣ ಯಂಡಿಗೇರಿ ಅಗ್ನಿವೀರ ಸೈನ್ಯಕ್ಕೆ ಆಯ್ಕೆ! ಸನ್ಮಾನ



**ಬಾದಾಮಿ** : ನಮ್ಮ ಶಾಕಂಭರೀ ವಿದ್ಯಾನಿಕೇತನ ಶಾಲೆಯ ಅಂಗ ಸಂಸ್ಥೆಯಾದ ಶ್ರೀ ವೀರಪುಲಕೇಶಿ ಆಯುರ್ವೇದಿಕ್ ಮಹಾವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹುಚ್ಚೇಶ್ ಯಂಡಿಗೇರಿ ಹಾಗೂ ಗೀತಾ ಹುಚ್ಚೇಶ ಯಂಡಿಗೇರಿ ಅವರ ಮಗನಾದ ಕುಮಾರ ಕೃಷ್ಣ ಹುಚ್ಚೇಶ್ ಯಂಡಿಗೇರಿ ಈತನು ಅಗ್ನಿವೀರ ಸೈನ್ಯಕ್ಕೆ ಸೇರಿರುವುದು ನಮಗೆಲ್ಲರಿಗೂ ಸಂತೋಷದ ವಿಷಯ ಇವರ ತಂದೆಯ ನಿಸ್ವಾರ್ಥ ಸೇವೆ ತಾಯಿಯ ದೈವ ಭಕ್ತಿಯ ಆದರ್ಶ ಗುಣಗಳಿಂದಾಗಿ ಮಗನಿಗೆ ಅಗ್ನಿವೀರ ಸೇರಲು ಸಹಾಯಕವಾಗಿದೆ ಎಂದು ಶಾಲೆಯ ಆಡಳಿತ ಮಂಡಳಿಯ ಚೇರಮನ್ನರು ಡಾ. ಬಸವರಾಜ್ ಮುಲ್ಕಿ ಪಾಟೀಲ ಹರ್ಷ ವ್ಯಕ್ತ ಪಡಿಸಿದರು

ಅವರು ತಾಲೂಕಿನ ಚೊಳಚಗುಡ್ಡ ಗ್ರಾಮದ ಶಾಕಂಭರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಅಗ್ನಿವೀರ ಸೈನ್ಯಕ್ಕೆ ಆಯ್ಕೆಯಾದ ಕೃಷ್ಣ ಯಂಡಿಗೇರಿ ಅವರನ್ನು ಸನ್ಮಾನಿಸಲಾಯಿತು,

ಉಮಾ ಬಸವರಾಜ ಮುಲ್ಕಿ ಪಾಟೀಲ, ಹುಚ್ಚೇಶ ಯಂಡಿಗೇರಿ ದಂಪತಿಗಳು ಹಾಗೂ ಆಡಳಿತ ಮಂಡಳಿ ಸದಸ್ಯರು, ಪ್ರಾಂಶುಪಾಲರು, ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಗುಳೇದಗುಡ್ಡ-ಹುಲ್ಲಿಕೇರಿ ಎಸ್.ಪಿ ಗ್ರಾಮದ ಮಾರ್ಗ, ಬಂಡೆಗಲ್ಲು ತೆರವು ಕಾರ್ಯ

## ರಸ್ತೆಯ ಮೇಲೆ ಬಿದ್ದ ಬಂಡೆಗಲ್ಲು, ತಪ್ಪಿದ ಅನಾಹುತ


**ಗುಳೇದಗುಡ್ಡ** : ತಾಲೂಕಿನ ಗುಳೇದಗುಡ್ಡ ಪಟ್ಟಣ-ಹುಲ್ಲಿಕೇರಿ ಎಸ್.ಪಿ ಗ್ರಾಮಕ್ಕೆ ಹೋಗುವ ರಸ್ತೆ ಮಾರ್ಗದಲ್ಲಿ ಇರುವ ಪಕ್ಕದ ಗುಡ್ಡದ ಬಂಡೆಗಳು ಕುಸಿದು ರಸ್ತೆ ಮೇಲೆ ಬಿದ್ದಿವೆ. ಆದರೆ ಆ ಸಮಯದಲ್ಲಿ ರಸ್ತೆ ಮೇಲೆ ಯಾವುದೇ ಅವಘಡ ಸಂಭವಿಸದೇ ಅನಾಹುತ ತಪ್ಪಿದೆ.

ಕಳೆದ ನಾಲ್ಕು ದಿನಗಳಿಂದ ಧಾರಾಕಾರವಾಗಿ ಸುರಿಯುತ್ತಿರುವ ಮಳೆಗೆ ಹುಲ್ಲಿಕೇರಿ ಮಾರ್ಗದ ರಸ್ತೆ ಪಕ್ಕದ ದೊಡ್ಡ ಗಾತ್ರದ ಬಂಡೆಗಲ್ಲು ಕುಸಿದು ರಸ್ತೆ ಮೇಲೆ ಬಂದು ಬಿದ್ದಿದೆ.

ಅದೃಷ್ಟವಶಾತ್ ಆ ಸಂದರ್ಭದಲ್ಲಿ ಯಾವುದೇ ವಾಹನ ಸಂಚರಿಸದ ಕಾರಣ ಅಪಾಯ ತಪ್ಪಿದೆ.

ರಸ್ತೆ ನಿರ್ಮಾಣ ಮಾಡುವಾಗ ಗುಡ್ಡವನ್ನು ಕೊರೆಯಲಾಗಿದೆ. ಆದರೆ ಕೆಲ ಅಪಾಯವನ್ನು ಒಡ್ಡಬಹುದಾದ ಇಂತಹ ದೊಡ್ಡ ಗಾತ್ರದ ಬಂಡೆ ಒಡೆದು ಅನಾಹುತ ಮುಂಚಿತವಾಗಿ ತಡೆಯಬಹುದಿತ್ತು.

ಈ ಬಂಡೆಯನ್ನು ರಸ್ತೆಯಿಂದ ತೆರವುಗೊಳಿಸಲು ಗ್ರಾಮಸ್ಥರು ಸಾಕಷ್ಟು ಬಾರಿ ಇಲಾಖಾ ಅಧಿಕಾರಿಗಳ



ಗಮನಕ್ಕೂ ತಂದರು ಕ್ರಮಕ್ಕೆ ಯಾರೂ ಮುಂದಾಗಿದ್ದಿಲ್ಲ.

ಮಳೆ ಬೀಳುವ ಸಂದರ್ಭದಲ್ಲಿ ಪ್ರಯಾಣಿಸುವಾಗ ಗ್ರಾಮಸ್ಥರು ಭಯಪಡುತ್ತಲೇ ಇದ್ದರು. ಆದರೆ ಈ ಸಲ ಬಂಡೆ ಕುಸಿದು ರಸ್ತೆ ಮೇಲೆ ಬಿದ್ದಿದೆ. ಅಧಿಕಾರಿಗಳು ಬಂಡೆಗಲ್ಲುಗಳನ್ನು ತೆರುವು ಮಾಡಲು ಮಂದಾಗಿದ್ದಾರೆ ಎಂದು ಗ್ರಾಪಂ ಮಾಜಿ ಅಧ್ಯಕ್ಷ ರಮೇಶ ಬೂದಿಹಾಳ ತಿಳಿಸಿದ್ದಾರೆ.

ಹುಲ್ಲಿಕೇರಿ ನಂದಿಕೇಶ್ವರ, ಪಟ್ಟದಕಲ್ಲು, ಐಹೊಳೆ, ಮಹಾಕೂಟ, ಶಿವಯೋಗಮಂದಿರ, ಬಾದಾಮಿ ಬನಶಂಕರಿಗೆ ಪ್ರಯಾಣಿಸುವ ಮಾರ್ಗವಾಗಿದೆ ಪ್ರವಾಸಿಗಳಿಗೆ ತೊಂದರೆಯಾಗದಂತೆ ರಸ್ತೆ ಅಕ್ಕ ಪಕ್ಕದ ಅಪಾಯ ವೊಡ್ಡುವ ಬೃಹದಾಕಾರದ ಕಲ್ಲು ಬಂಡೆಗಳನ್ನು ಸ್ಥಳಾಂತರಿಸಬೇಕೆಂದು ಹುಲ್ಲಿಕೇರಿ ಎಸ್.ಪಿ.ಗ್ರಾಮದ ಹಾಗೂ ಜಿಪಂ ಮಾಜಿ ಉಪಾಧ್ಯಕ್ಷೆ ಮಂಜುಳಾ ಶೇಖರ ರಾಠೋಡ ಒತ್ತಾಯಿಸಿದ್ದಾರೆ.

ಬಹಳ ದಿನಗಳಿಂದ ದೊಡ್ಡ ಬಂಡೆಗಲ್ಲು ರಸ್ತೆ ಮೇಲೆ ಉರುಳುವ ಭಯ ಜನರಲ್ಲಿ ಇತ್ತು. ಲೋಕೋಪಯೋಗಿ ಇಲಾಖೆ

**ಕಲ್ಲು ತೆಗೆಯಲು ಹಲವು ತಿಂಗಳ ಹಿಂದೆಯೇ ಅರಣ್ಯಾಧಿಕಾರಿಗಳಿಗೆ ಪತ್ರ ಬರೆದಿದ್ದೇವೆ. ಆದರೆ ಅವರು ಕೆಲಸ ಮಾಡದ ಕಾರಣ ಮಳೆಗೆ ಎರಡು ಮೂರು ಕಲ್ಲು ರಸ್ತೆಗೆ ಬಿದ್ದಿವೆ. ಅನಾಹುತ ತಪ್ಪಿಸಲು ಪಿಡಬ್ಲೂಡಿ ಇಲಾಖೆಯಿಂದ ಗುಡ್ಡದಲ್ಲಿರುವ ಮತ್ತು ಬೀಳುತ್ತಿರುವ ಬಂಡೆಗಳನ್ನು ಉರಳಿಸಲಾಗಿದೆ. ಅವುಗಳು ದೊಡ್ಡ ಬಂಡೆಕಲ್ಲಾಗಿರುವ ಕಾರಣ ಅವುಗಳನ್ನು ಒಡೆದು ಮತ್ತು ರಸ್ತೆ ಮೇಲೆ ಬಿದ್ದಿರುವ ದೊಡ್ಡ ಗಾತ್ರದ ಬಂಡೆಗಳನ್ನು ಯಂತ್ರದ ಸಹಾಯದಿಂದ ಒಡೆದು ಎರಡು ದಿವಸದಲ್ಲಿ ತೆರವುಗೊಳಿಸಲಾಗುವುದು.**

**-ಅಸ್ಲಾಂ ಮಕಾಂದಾರ**
**ಜೆಇ, ಪಿಡಬ್ಲೂಡಿ ಬಾದಾಮಿ**

ಬಂಡೆ ತೆಗೆಯದ ಕಾರಣ ಕಳೆದ ನಾಲ್ಕಾರು ದಿನಗಳಿಂದ ಸತತ ಮಳೆಯಾದ ಪರಿಣಾಮವಾಗಿ ದೊಡ್ಡ ಗಾತ್ರದ ಬಂಡೆ ಕುಸಿದು ರಸ್ತೆ ಮೇಲೆ ಬಿದ್ದಿದೆ.

ಸದ್ಯ ಇಲಾಖೆಯವರು ಬಂಡೆ ತೆಗೆದು ಸುಗಮ ಸಂಚಾರಕ್ಕೆ ಕ್ರಮಕೈಗೊಳ್ಳುತ್ತಿದ್ದಾರೆ ಎಂದು ಗ್ರಾಪಂ ಮಾಜಿ ಸದಸ್ಯ ಪಿಂಟು ರಾಠೋಡ ತಿಳಿಸಿದರು.

## ಮನೆ ಕುಸಿದು ಇಬ್ಬರು ಮಹಿಳೆಯರಿಗೆ ಗಾಯ



**ನವಲಗುಂದ :** ತಾಲ್ಲೂಕಿನಲ್ಲಿ ಸತತ ಮಳೆಯಿಂದಾಗಿ ತೇವಾಂಶ ಹೆಚ್ಚದ ಪರಿಣಾಮ ಶುಕ್ರವಾರ ಹನಸಿ ಗ್ರಾಮದಲ್ಲೊಂದು ಮನೆ ಕುಸಿದು ಬಿದ್ದು ಇಬ್ಬರು ಮಹಿಳೆಯರು ತೀವ್ರವಾಗಿ ಗಾಯಗೊಂಡ ಘಟನೆ ಜರುಗಿದೆ.

ಮನೆಯಲ್ಲಿ ಅಡುಗೆ ಕೆಲಸದಲ್ಲಿ ನಿರತರಾದ ಸಂದರ್ಭದಲ್ಲಿ ಏಕಾ,ಏಕಿ ಮನೆ ಕುಸಿದು ಬಿದ್ದಿದ್ದ-ರಿಂದ ಮನೆಯಲ್ಲಿದ್ದ ಅತ್ತೆ ಮಂಗಳಾ ಮರಿಗೌಡ ಪಾಟೀಲ್(55)ಗೆ ಗಂಭೀರ ಪೆಟ್ಟಾಗಿದ್ದ-ರೆ, ಸೊಸೆ ಸುವರ್ಣಾ ಬಾಪುಗೌಡ ಪಾಟೀಲ್ (37) ಅವರಿಗೆ ತಲೆಗೆ ಗಾಯವಾಗಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದುದರಿಂದ ಇಬ್ಬರೂ ಮಹಿಳೆಯರನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮನೆ ಬಿದ್ದ ನಂತರ ಒಳಗಿದ್ದ ಮಹಿಳೆಯರ ಚೀರಾಟ ಕೇಳಿ ಅಕ್ಕ,ಪಕ್ಕದ ಮನೆಯವರು ಈ ಇಬ್ಬರು ಮಹಿಳೆಯರನ್ನು ಹೊರತಂದು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರಗೆ ಕಳುಹಿಸಿದ್ದಾರೆ. ಗ್ರಾಮದಲ್ಲಿದ್ದ ಗ್ರಾಮಲೆಕ್ಕಿಗ ಸ್ಥಳಕ್ಕೆ ಆಗಮಿಸಿ ಗಾಯಳುಗಳೊಂದಿಗೆ ಆಸ್ಪತ್ರೆಗೆ ತೆರಳಿದ್ದಾರೆ.

ನಂತರ ಮಾಹಿತಿ ಪಡೆದ ತಹಶೀಲ್ದಾರ ಸುಧೀರ ಸಾಹುಕಾರ ಕಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಗಳಿಗೆ ಸಾಂತ್ವನ ಹೇಳಿ ಮೇಲಧಿಕಾರಿಗಳೊಂದಿಗೆ ಮಾತನಾಡಿ ಸೂಕ್ತ ಪರಿಹಾರ ನೀಡುವುದಾಗಿ ಭರವಸೆ ನೀಡಿದ್ದಾರೆ.

## ಹುಬ್ಬಳ್ಳಿ-ಧಾರವಾಡ ಭೀಕರ ಅಪಘಾತ: ಐವರ ಸಾವು



**ಹುಬ್ಬಳ್ಳಿ :** ಹುಬ್ಬಳ್ಳಿ ಹಾಗೂ ಧಾರವಾಡಗಳಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಐವರು ಸಾವನ್ನಪ್ಪಿ, ಇಬ್ಬರು ಗಾಯಗೊಂಡ ದುರ್ಘಟನೆ ಇಂದು ಬೆಳಗಿನ ಜಾವ ನಡೆದಿದೆ.

ಹುಬ್ಬಳ್ಳಿಯ ಹೊರವಲಯದ ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಧಾರಾವತಿ ಹನುಮಂತ ದೇವಸ್ಥಾನದ ಬಳಿ ಬೈಕ್ ಹಾಗೂ ಟವೇರಾ ಕಾರಿನ ನಡುವೆ ಡಿಕ್ಕಿ ಸಂಭವಿಸಿ ಇಬ್ಬರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಮೃತರನ್ನು ಕುಂದಗೋಳ ಪಟ್ಟಣದ ಕುಂಬಾರ ಓಣಿ ನಿವಾಸಿಗಳಾದ ಶಿವರಾಜ ಮತ್ತು ಗದಿಗೆಪ್ಪ ಎಂದು ಗುರುತಿಸಲಾಗಿದೆ.

ಘಟನಾ ಸ್ಥಳಕ್ಕೆ ಉತ್ತರ ಸಂಚಾರಿ ಠಾಣೆ ಪೊಲೀಸರು ಭೇಟಿ ನೀಡಿದ್ದು, ಮುಂದಿನ ಕ್ರಮ ಕೈಕೊಳ್ಳಲಾಗಿದೆ.

**ಧಾರವಾಡ:** ಧಾರವಾಡದ ಸಂಪಿಗೆನಗರ ಬಳಿ ಟ್ರಕ್ ಹಾಗೂ ಆಟೋರಿಕ್ಷಾ ನಡುವೆ ಸಂಭವಿಸಿದ ಅಪಘಾತದಲ್ಲಿ ಮೂವರು ಸಾವನ್ನಪ್ಪಿ ಇಬ್ಬರು ಗಾಯಗೊಂಡಿದ್ದಾರೆ.

ಮೃತರನ್ನು ಪ್ರಣಯ ಹಂಚಿನಮನಿ(8), ಅಮರವ್ವ ಹಂಚಿನಮನಿ(60) ಹಾಗೂ ರಮೇಶ ಹಂಚಿನಮನಿ(40) ಎಂದು ಗುರುತಿಸಲಾಗಿದೆ. ಗಾಯಾಳುಗಳಾದ ರೇಣುಕಾ ಹಾಗೂ ಪೃಥ್ವಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಇವರುಗಳು ಧಾರವಾಡದ ಕೆಲಗೇರಿ ನಿವಾಸಿಗಳೆಂದು ತಿಳಿದು ಬಂದಿದೆ.

ಧಾರವಾಡ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಮುಂದಿನ ಕ್ರಮಕೈಗೊಂಡಿದ್ದಾರೆ.

# ಪರಿಹಾರ ನೀಡಿಕೆಯಲ್ಲಿ ನಿರ್ಲಕ್ಷ್ಯ ತೋರಿದರೆ ಕ್ರಮ

**ನವಲಗುಂದ :** ತಾಲ್ಲೂಕಿನಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಸಾಕಷ್ಟು ಹಾನಿಯಾದ ಪ್ರವಾಹ ಪೀಡಿತ, ಬೆಳೆ ಹಾನಿ ಪ್ರದೇಶಕ್ಕೆ ಜಿಲ್ಲಾಧಿಕಾರಿ ದಿವ್ಯ ಪ್ರಭು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರವಾಹ, ಬೆಳೆಹಾನಿ ಪರಿಹಾರ ಕಡೆ ನಿರ್ಲಕ್ಷ್ಯ ತೋರಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ತೋಟಗಾರಿಕೆ ಹಾಗೂ ಕೃಷಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಪ್ರವಾಸ ಸಂದರ್ಭದಲ್ಲಿ ವಿವಿಧ ಗ್ರಾಮಗಳ ರೈತರನ್ನು, ಜನಪ್ರತಿನಿಧಿಗಳನ್ನು ಮತ್ತು ಸಾರ್ವಜನಿಕರನ್ನು ಭೇಟಿ ಆಗಿ ಅಹವಾಲು ಕೇಳಿದರು. ಮನವಿ ಸ್ವೀಕರಿಸಿದರು. ಬೆಳೆಹಾನಿ ಬಗ್ಗೆ ತುರ್ತಾಗಿ ಜಂಟಿ ಸಮೀಕ್ಷೆ ಮಾಡಲು ಅಧಿಕಾರಿಗಳಿಗೆ ಈಗಾಗಲೇ ನಿರ್ದೇಶನ ನೀಡಲಾಗಿದೆ. ಮನೆ ಹಾನಿ ಮತ್ತು ಮನೆಗಳಿಗೆ ನೀರು ನುಗ್ಗಿ ಹಾನಿ ಆಗಿರುವ ಬಗ್ಗೆ ವರದಿ ಸಲ್ಲಿಸಿ, ಅದ-ಕ್ಕೆ ಪರಿಹಾರ ಕ್ರಮ ಜರುಗಿಸಲು ಗ್ರಾಮ ಪಂಚಾಯತ ಮತ್ತು ತಹಶೀಲ್ದಾರ ಅವರಿಗೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ತುಪ್ಪರಿಹಳ್ಳಕ್ಕೆ ಅಯಟ್ಟಿ ಮತ್ತು ಶಿರೂರ ಮಧ್ಯೆ ನಿರ್ಮಿಸಿರುವ ಸೇತುವೆಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ಶಿರೂರ



ಹಾಗೂ ಆಯಟ್ಟಿ ಗ್ರಾಮಸ್ಥರಿಂದ ಮನವಿ ಸ್ವೀಕರಿಸಿದರು. ಸೇತುವೆ ಎತ್ತರಗೊಳಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು. ಹಾರೊಬೆಳವಡಿ ಆಯಟ್ಟಿ ರಸ್ತೆ ಅಭಿವೃದ್ಧಿ ಬಗ್ಗೆ ಪರಿಶೀಲಿಸುವದಾಗಿ ಅವರು ತಿಳಿಸಿದರು.

ನಂತರ ಅವರು ಆಯಟ್ಟಿ ಗ್ರಾಮದ ಫಕ್ಕೀರಪ್ಪ ಜೋಗನ್ನವರ ತೋಟದಲ್ಲಿ ಹಳ್ಳದ ನೆರೆ ಹಾಗೂ ಅತಿ ಮಳೆಯಿಂದಾಗಿ ಹಾಳಾಗಿರುವ ಹತ್ತಿ ಬೆಳೆ ಮತ್ತು ಕಡಲೆ ಬೆಳೆ ಪರಿಶೀಲಿಸಿದರು.

ಶಿರೂರ ಗ್ರಾಮಸ್ಥರಿಂದ ಮನವಿ: ತುಪ್ಪರಿಹಳ್ಳದ ನೆರೆ ಹಾವಳಿಯಿಂದ ಶಿರೂರ ಗ್ರಾಮದ ಶಾಲೆ ಆವರಣ ಹಾಗೂ 100 ಕ್ಕೂ ಹೆಚ್ಚು ಮನೆಗಳಿಗೆ ನೀರು ಬಂದಿದೆ. ಇದನ್ನು ತೆರವುಗೊಳಿಸಿ, ಸ್ವಚ್ಛಗೊಳಿಸಬೇಕು. ಹಾಳಾಗಿರುವ ರಸ್ತೆ ದುರಸ್ತಿ ಮಾಡಬೇಕು. ಹೆಚ್ಚುವರಿ ಆಗಿ ಹೆಸರು ಕಾಳು ಖರೀದಿ ಮಾಡಬೇಕು ಮತ್ತು ಬೆಳೆ ಹಾನಿ ಪರಿಹಾರ ನೀಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಗ್ರಾಮಸ್ಥರು ಮನವಿ ಮಾಡಿದರು.

ಜಿಲ್ಲಾಧಿಕಾರಿಗಳು ಮಾತನಾಡಿ, ಶಾಲಾ ಆವರಣ, ಮನೆಗಳಿಗೆ ನೀರು ಬಂದಿರುವ ಕುರಿತು ಸ್ವಚ್ಛತೆ ಕೈಗೊಳ್ಳು ತಾಲ್ಲೂಕು ಪಂಚಾಯತ ಇಓ ಹಾಗೂ ಬಿಇಓ ಅವರಿಗೆ ಈಗಾಗಲೇ ಪಿ.ಆರ್.ಇ.ಡಿ ವಿಭಾಗಗಳಿಗೆ ತಿಳಿಸಲಾಗಿದೆ ಎಂದರು. ಬೆಳೆ ಹಾನಿ ಕುರಿತು ಜಂಟಿ ಸಮೀಕ್ಷೆ ಮಾಡಿ ಅದರ ವರದಿಯನ್ನು ಗ್ರಾಮ ಪಂಚಾಯತ, ತಹಶೀಲ್ದಾರ ಕಚೇರಿ, ರೈತ ಸಂಪರ್ಕ ಕೇಂದ್ರ, ಜಿಲ್ಲಾಧಿಕಾರಿಗಳ ಕಚೇರಿ ವೆಬ್‌ಸೈಟದಲ್ಲಿ ಪ್ರಕಟಿಸಲಾಗುತ್ತದೆ. ಹೆಸರು ಬಿಟ್ಟು ಹೋಗಿದ್ದರೆ ರೈತರು ಆಕ್ಷೇಪಣೆ ಸಲ್ಲಿಸಲು ಒಂದು ವಾರದ ಅವಕಾಶ ನೀಡಲಾಗಿರುತ್ತದೆ. ರೈತರು ಪರಿಶೀಲಿಸಿ, ತಮ್ಮ ಹೆಸರು, ಜಮೀನು ಬೆಳೆಹಾನಿ ವಿವರ ಪ್ರಕಟವಾಗಿರದಿದ್ದಲ್ಲಿ ಮನವಿ ಆಕ್ಷೇಪಣೆ ಸಲ್ಲಿಸಬೇಕು. ಮರು ಸಮೀಕ್ಷೆ ಮಾಡಿ ಅರ್ಹವಿದ್ದಲ್ಲಿ ಪಟ್ಟಿಗೆ ಸೇರ್ಪಡೆ ಮಾಡುವದಾಗಿ ಅವರು ತಿಳಿಸಿದರು.

ಅಮ್ಮಿನಭಾವಿ-ಶಿರೂರ ರಸ್ತೆ ನಿರ್ಮಾಣದ ಬಗ್ಗೆ ದೂರುಗಳಿದ್ದಲ್ಲಿ ಲಿಖಿತವಾಗಿ ಸಲ್ಲಿಸಿದರೆ ಪರಿಶೀಲಿಸಿ, ತಪ್ಪಿತಸ್ಥರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿಗಳು ಭರವಸೆ ನೀಡಿದರು.

ಶಿರೂರ ಗ್ರಾಮ ಪಂಚಾಯತರ ಉಪಾಧ್ಯಕ್ಷ ಸಂಗನಗೌಡ ತೋಟದ, ಸದಸ್ಯ ಈರಣ್ಣ ಕಡೆಮನಿ, ರೈತ ಮುಖಂಡ ಮಲ್ಲನಗೌಡ ಸೇರಿದಂತೆ ಇತರರು ಇದ್ದರು.

## ಸ್ತ್ರೀ ವ್ಯಕ್ತಿಅಲ್ಲ ಶಕ್ತಿ: ಆಕಾಶವಾಣಿಯ ಉದ್ಘೋಷಕಿ ಜಿ. ಸುರೇಖಾ ಸುರೇಶ

**ಧಾರವಾಡ :** ಸ್ತ್ರೀ ಒಂದು ವ್ಯಕ್ತಿಯಾಗಿರದೇ ಕುಟುಂಬದ ಶಕ್ತಿಯಾಗಿಕುಟುಂಬ ಮುನ್ನಡೆಸುತ್ತ ಮಗುವಿಗೆ ಜನ್ಮ ನೀಡಿದ್ದಲ್ಲದೇ, ಲಾಲನೆ ಪಾಲನೆಯೊಂದಿಗೆ ಸಂಸ್ಕಾರವನ್ನುದಾರೆ ಎರೆಯುವ ಮೂಲಕ ಸದೃಢ ಸಮಾಜ ನಿರ್ಮಾಣಕ್ಕೆ ಕಾರಣವಾದವಳು ಎಂದು ಆಕಾಶವಾಣಿಯ ಉದ್ಘೋಷಕಿ ಜಿ. ಸು-ರೇಖಾ ಸುರೇಶ ಹೇಳಿದರು.

ಅವರುಕರ್ನಾಟಕ ವಿದ್ಯಾವರ್ಧಕ ಸಂಘದ ಮಹಿಳಾ ಮಂಟಪ ಆಯೋಜಿಸಿದ್ದ 'ಮಹಿಳೆ ಮತ್ತು ಕಲೆ' ಕಾರ್ಯಕ್ರಮದಅತಿಥಿಯಾಗಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡುತ್ತಾ, ಮಹಿಳೆಯ ಶಕ್ತಿ ಬರೀಕುಟುಂಬ ನಿರ್ವಹಣೆಗೆ ಸೀಮಿತವಾಗದೇ ತನ್ನೊಳಗಿರುವ ಪ್ರತಿಭೆಯ ಮೂಲಕ ಸಮಾಜದಲ್ಲಿ ಗುರುತಿಸಿಕೊಳ್ಳುವಂತಾಗಬೇಕು.ನಿಜವಾದಜನಪದ ಕಲೆ ಮಹಿಳೆಯರಲ್ಲಿ ಅಡಗಿದೆ.ಅದನ್ನು ಗುರುತಿಸಿ




ಪ್ರೋತ್ಸಾಹಿಸುವ ಕಾರ್ಯಕರ್ನಾಟಕ ವಿದ್ಯಾವರ್ಧಕ ಸಂಘದಂತೆ ಉಳಿದ ಸಂಘ-ಸಂಸ್ಥೆಗಳೂ ವೇದಿಕೆಯನ್ನು ಕಲ್ಪಿಸಿಕೊಡುವಂತಾಗಬೇಕು ಎಂದರು.

ಮಹಿಳೆಯರಿಗಾಗಿ ಕಿರುನಾಟಕ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು ಸ್ಪರ್ಧೆಯ ನಿರ್ಣಾಯಕರಾಗಿ ಶ್ರೀಮತಿ ಸೀತಾ ಛಪ್ಪರ, ಆರತಿ ದೇವಶಿಖಾಮಣಿ ಮತ್ತುಡಾ.ಪ್ರಕಾಶ ಮಲ್ಲಿಗವಾಡ ಆಗಮಿಸಿದ್ದರು.

ಪ್ರಮೀಳಾ ಜಕ್ಕಣ್ಣವರ ಭಕ್ತಿಗೀತೆ, ಡಾ.ನಿರ್ಮಲಾ ಮತ್ತು ಮಂಗಲಾ ಚಿಗಟೇರಿ ಭಾವಗೀತೆ, ಮುತ್ತು ಹಿರೇಮಠ ಚಲನಚಿತ್ರಗೀತೆ ಹಾಗೂ ಕಸ್ತೂರಿ ಮತ್ತು ಸಂಗಡಿಗರು ಜನಪದ ಗೀತೆ ಪ್ರಸ್ತುತ ಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಚಂದ್ರಕಾಂತ ಬೆಲ್ಲದ ವಹಿಸಿ, ಕಿರು ನಾಟಕ ಸ್ಪರ್ಧೆಯಲ್ಲಿ ಸ್ಪರ್ಧಿಸಿದ ಎಲ್ಲಾ ನಾಟಕ ತಂಡಗಳಿಗೆ ಹಾಗೂ ಸಂಗೀತ ಪ್ರಸ್ತುತ ಪಡಿಸಿದವರಿಗೆ ಬಹುಮಾನ ನೀಡಿ ಶುಭ ಹಾರೈಸಿದರು.

ಮಹಿಳಾ ಮಂಟಪದ ಸಂಚಾಲಕಿ ಡಾ.ಶೈಲಜಾ ಅಮರಶೆಟ್ಟಿ ಸ್ವಾಗತಿಸಿದರು. ಶಂಕರ ಕುಂಬಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ ಸುಧಾ ಹುಲಗೂರ ಪ್ರಾರ್ಥಿಸಿದರು. ಶಾರದಾ ಕೌದಿ ಅತಿಥಿಗಳನ್ನು ಪರಿಚಯಿಸಿದರು. ಡಾ. ವಿ. ಶಾರದಾ ನಿರೂಪಿಸಿದರು. ಜ್ಯೋತಿ ಭಾವಿಕಟ್ಟಿ ವಂದಿಸಿದರು.

# ದ್ರಾಕ್ಷಿಗೆ 'ದಾವನಿ' ರೋಗ-ರೈತ ಕಂಗಾಲು







* ಮಲ್ಲಿಕಾರ್ಜುನ ತುಂಗಳ

**ರಬಕವಿ-ಬನಹಟ್ಟಿ :** ದ್ರಾಕ್ಷಿ ಬೆಳೆಯುವ ರೈತ ಪದೇ ಪದೇ ಕೀಟಗಳ ಉಪಟಳದಿಂದ ಹಾನಿಗೊಳಗಾಗುತ್ತಿರುವದು ಈಚೆಗೆ ಸಾಮಾನ್ಯವಾಗಿದೆ. ಕಳೆದ ವರ್ಷವೇ ದಾವನಿ ರೋಗ ಹಾಗು ಕಾಂಡ ಕೊರೆಯುವ ಕೀಟಗಳಿಂದ ಹಾನಿಗೊಳಗಾಗಿದ್ದ, ಮತ್ತೇ ಪ್ರಸಕ್ತ ವರ್ಷವೂ ದ್ರಾಕ್ಷಿ ಬೆಳೆಗೆ ವೇಗವಾಗಿ ಲಗ್ಗೆಯಿಟ್ಟಿದ್ದು ರೈತ ತೀವ್ರ ಆತಂಕಕ್ಕೊಳಗಾಗುವಲ್ಲಿ ಕಾರಣವಾಗಿ ತೀವ್ರ ಕಂಗಾಲಾಗಿದ್ದಾರೆ.

**ಕಾರಣ :**

ವಾತಾವರಣದ ವೇಗದ ಬದಲಾವಣೆಯಿಂದ ಇಬ್ಬನಿ, ಮೋಡ ಕವಿದ ವಾತಾವರಣ ತುಂತುರು ಮಳೆಯಿಂದಾಗಿ ಬೆಳೆಗೆ ರೋಗ ತಗಲುತ್ತಿದೆ. ರಬಕವಿ-ಬನಹಟ್ಟಿ ತಾಲೂಕಿನಲ್ಲಿ ಒಟ್ಟು 2 ಸಾವಿರ ಎಕರೆಯಷ್ಟು ದ್ರಾಕ್ಷಿಬೆಳೆಲಾಗಿದೆ. ಅದರಲ್ಲಿ ಜಗದಾಳ, ಬಂಡಿಗಣಿ, ನಾವಲಗಿ, ಹಿಪ್ಪರಗಿ ಗ್ರಾಮಗಳಲ್ಲಿಯೇ

> **‘ದಾವನಿ ರೋಗದಿಂದ ದ್ರಾಕ್ಷಿ ಬೆಳೆಯ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಉದುರುತ್ತಿವೆ. ಈ ರೋಗದಿಂದ ಬೆಳೆ ರಕ್ಷಿಸಿಕೊಳ್ಳಲು ದಿನಂಪ್ರತಿ ಔಷಧ ಸಿಂಪಡಣೆ ಮಾಡುತ್ತಿದ್ದರೂ ತಡೆಯಲು ಸಾಧ್ಯವಾಗುತ್ತಿಲ್ಲ.**
>
> ◆ **ಸುಭಾಸ ಉಳ್ಳಾಗಡ್ಡಿ, ದ್ರಾಕ್ಷಿ ಬೆಳೆಗಾರ, ಜಗದಾಳ.**

ಹೆಚ್ಚಿನ ಪ್ರಮಾಣದಲ್ಲಿ ಬೆಳೆದಿದ್ದು, ಇಳುವರಿ ಗಣನೀಯವಾಗಿ ಕುಸಿಯುವ ಭೀತಿ ರೈತರನ್ನು ಕಾಡುತ್ತಿದೆ.

**25 ವರ್ಷಗಳಿಂದ ದ್ರಾಕ್ಷಿ:**

ಕಬ್ಬು, ಅರಿಷಿನ ಬೆಳೆಯುತ್ತಿದ್ದ ಭೂಮಿಯಲ್ಲಿ ಈ ಭಾಗದಲ್ಲಿ ಮೊದಲ ಬಾರಿ ಜಗದಾಳದ ಉಳ್ಳಾಗಡ್ಡಿ ಕುಟುಂಬವು ದ್ರಾಕ್ಷಿ ಬೆಳೆಯುವ ಮೂಲಕ ಈ ಭಾಗದಲ್ಲಿಯೂ ಇಂತಹ ಬೆಳೆ ಬೆಳೆಯಬಹುದೆಂದು ತೋರಿಸಿಕೊಟ್ಟು ಸೈ ಎನ್ನಿಸಿಕೊಂಡಿದ್ದರು. ಆದರೆ ಇತ್ತೀಚಿನ

> **‘ದ್ರಾಕ್ಷಿ ಬೆಳೆ ನಂಬಿದ ನಮಗೆ ಮತ್ತೇ ಹಾನಿ ಭೀತಿ ಕಾಡುತ್ತಿದೆ. ವಿಮಾ ಹಣವೂ ಸಮರ್ಪಕವಾಗಿ ಬಿಡುಗಡೆಯಾಗುತ್ತಿಲ್ಲ. ತೋಟಗಾ-ರಿಕೆ ಇಲಾಖೆ ಪೂರಕ ವ್ಯವಸ್ಥೆ ಮಾಡಬೇಕಿದೆ.’**
>
> ◆ **ರಮೇಶ ಪಾಟೀಲ ರೈತ.**

ದಿನಗಳಲ್ಲಿ ಇಂತಹ ರೋಗಗಳಿಂದ ನಿರಂತರ ಹಾನಿ ರೈತರ ಆರ್ಥಿಕ ಸಂಕಷ್ಟ ಎದುರಿಸುವಲ್ಲಿ ಕಾರಣವಾಗಿದೆ.

**ಹನಿ ನೀರಾವರಿ:**

ಈ ಭಾಗದಲ್ಲಿ ಜಿಎಲ್‌ಬಿಸಿ ಕಾಲುವೆ ಹರಿದಿದ್ದರೂ ಕೊಂಚ ದೂರದ ಪ್ರದೇಶದಲ್ಲಿ ದ್ರಾಕ್ಷಿ ಬೆಳೆಯಲಾಗುತ್ತಿದೆ. ಆದರೂ ಹನಿ ನೀರಾವರಿ ಅಳವಡಿಸಿಕೊಂಡು ದ್ರಾಕ್ಷಿ ಬೆಳೆಯುವದಕ್ಕೆ ಬಹಳಷ್ಟು ರೈತರು ಸಿದ್ಧತೆ ಕೈಗೊಂಡಿದ್ದರು. ಆದರೆ ದ್ರಾಕ್ಷಿಗೆ ರೋಗ ಕಾಣಿಸಿಕೊಳ್ಳುತ್ತಿರುವದರಿಂದ ರೈತರಿಗೆ ನಿರಾಸೆಯಾಗಿದೆ.

20 ದಿನಗಳಲ್ಲಿಯೇ ರೋಗ ಶುರು: ಸೆಪ್ಟೆಂಬರ್ ಹಾಗು ಅಕ್ಟೋಬರ್ ತಿಂಗಳು ದ್ರಾಕ್ಷಿ ಬೆಳೆ ಚಾಟನಿಗೆ ಅನುಕೂಲಕರ ವಾತಾವರಣ, ಆದರೆ ಕೇವಲ 20 ದಿನಗಳಲ್ಲಿಯೇ ದ್ರಾಕ್ಷಿ ಇದೀಗ ಹಣ್ಣು ಮೊಳಕೆಯಾಗುವ ಸಂದರ್ಭದಲ್ಲಿಯೇ ಕಾಂಡಕ್ಕೆ ರೋಗ ಅಂಟಿಕೊಂಡು ಸಂಪೂರ್ಣ ನಾಶವಾಗುವಲ್ಲಿ ಕಾರಣವಾಗುತ್ತಿದೆ.

**ವಿಮೆಯಲ್ಲೂ ತಾರತಮ್ಯ:**

ಕಳೆದ ಬಾರಿ ಕೇಂದ್ರ ಸರ್ಕಾರದ ಫಸಲು ಭೀಮಾ ಯೋಜನೆಯಡಿ ಬೆಳಗಾವಿ ಜಿಲ್ಲೆಯಲ್ಲಿ ಎಕರೆಗೆ 90 ಸಾವಿರ ರೂ.ಗಳಷ್ಟು ರೈತರಿಗೆ ಪರಿಹಾರ ಒದಗಿಸಿದ್ದರೆ, ಬಾಗಲಕೋಟೆ ಜಿಲ್ಲೆ ರೈತರಿಗೆ ಕೇವಲ 20 ರಿಂದ 30 ಸಾವಿರ ರೂ.ಗಳಷ್ಟು ಮಾತ್ರ ಪರಿಹಾರ ಒದಗಿಸಿದೆ. ಮಳೆ ಮಾಪನದ ನೆಪ ಹೇಳುವ ಮೂಲಕ ಕೈ ತೊಳೆದುಕೊಳ್ಳುತ್ತಿದ್ದಾರೆ.

## ಹೆಚ್ಚುವರಿ ವಿದ್ಯುತ್ ಬಿಲ್‌ಗೆ ನೇಕಾರರ ನಕಾರ



**ರಬಕವಿ-ಬನಹಟ್ಟಿ :** ಕಳೆದ ಏಪ್ರಿಲ್ 2023 ರಿಂದ ವಿದ್ಯುತ್ ಬಿಲ್ ಹೆಚ್ಚುವರಿಯನ್ನು ಸರ್ಕಾರವೇ ಭರಿಸುವಂತೆ ನೇಕಾರ ಸಂಘಟನೆಗಳ ಮೂಲಕ ಸರ್ಕಾರವನ್ನು ಒತ್ತಾಯಪಡಿಸಿವೆ.

ಹುಬ್ಬಳ್ಳಿಯ ಹೆಸ್ಕಾಂ ಕಚೇರಿಯ ಮುಖ್ಯ ವ್ಯವಸ್ಥಾಪಕರನ್ನು ಭೆಟ್ಟಿ ನೀಡಿ ಮನವಿ ನೀಡಿದ ನೇಕಾರರು, ಈಗಾಗಲೇ ಬಾಕಿಯಿರುವ ನೇಕಾರರಿಗೆ ಯಾವದೇ ರೀತಿ ಕಿರುಕುಳ ನೀಡದೆ, ಯಾವದೇ ಶುಲ್ಕ, ಬಡ್ಡಿ ಆಕರಣೆ ಮಾಡದೆ ಕಂತುಗಳ ಮೂಲಕ ಭರಣಾ ಮಾಡಿಕೊಳ್ಳಬೇಕು. ಈಗಾಗಲೇ ನೇಕಾರರು ಉದ್ಯೋಗವಿಲ್ಲದೆ ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಸರ್ಕಾರ ಕೂಡಲೇ ಮಧ್ಯಸ್ಥಿಕೆ ವಹಿಸಿ ನೇಕಾರರ ಸಮಸ್ಯೆಗೆ ಸ್ಪಂದಿಸುವಂತೆ ನೇಕಾರರು ಸಾಮೂಹಿಕವಾಗಿ ತಮ್ಮ ಅಳಲು ತೋಡಿಕೊಂಡರು.

ಧರಣಿ: ಹುಬ್ಬಳ್ಳಿಯ ಕೆಎಚ್‌ಡಿಸಿ ಕೇಂದ್ರ ಕಚೇರಿಯಲ್ಲಿ ಪ್ರತಿಭಟನಾ ಪಾದಯಾತ್ರೆ ಮೂಲಕ ಧರಣಿ ನಡೆಸಿ ಮನವಿ ಸಲ್ಲಿಸಲಾಯಿತು. ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ನೇಕಾರ ಕುಟುಂಬಗಳ ಸಮೀಕ್ಷೆಯಾಗಬೇಕೆಂದು ನೇಕಾರರು ಒತ್ತಾಯಿಸಿದರು.

ನಿವೇಶನಕ್ಕೆ ಒತ್ತಾಯ: ನೇಕಾರರು ತಮ್ಮ ಉದ್ಯೋಗದಿಂದ ಸಿಗುವ ವೇತನದಲ್ಲಿ ಮನೆ ಬಾಡಿಗೆಯೊಂದಿಗೆ ದೈನಂದಿನ ಬದುಕು ಸಾಗಿಸುತ್ತಿದ್ದರು. ಇದೀಗ ಉದ್ಯೋಗವಿಲ್ಲದೆ ಬಾಡಿಗೆ ಭರಿಸುವದು ದೂರವಿರಲಿ ಬದುಕಿನ ತುತ್ತಿನ ಚೀಲವೇ ತುಂಬದ ಪರಿಸ್ಥಿತಿ ಎದುರಾಗಿದೆ. ಬಡತನ ರೇಖೆಗಿಂತಲೂ ಕಡಿಮೆಯಲ್ಲಿ ಬದುಕುತ್ತಿರುವ ನೇಕಾರರ ಬದುಕಿಗೆ ಸೂರು ಕಲ್ಪಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಒತ್ತಾಯಿಸಿದರು.

ನೇಕಾರ ಸೇವಾ ಸಂಘದ ರಾಜ್ಯಾಧ್ಯಕ್ಷ ಶಿವಲಿಂಗ ಟಿರಕಿ, ಜಗದೀಶ ಗುಳ್ಳ, ರಾಜೇಂದ್ರ ಮಿರ್ಜಿ, ಬಸವರಾಜ ಚೌಕಾಶಿ, ನಾರಾಯಣ ಹವಳಕರ, ರುದ್ರಪ್ಪ ಕಾಮಕರ ಸೇರಿದಂತೆ ನೂರಾರು ನೇಕಾರರು ಉಪಸ್ಥಿತರಿದ್ದರು.

# ನವೀಕರಣವಿಲ್ಲದೆ ನೆಲೆ ಕಾಣದ ನೇಕಾರರು: ಎರಡು ದಶಕಗಳಿಂದ ಭಾರಿ ಸಂಕಷ್ಟ ಎದುರಿಸುತ್ತಿರುವ ಜವಳಿ ಕ್ಷೇತ್ರ

* ಮಲ್ಲಿಕಾರ್ಜುನ ತುಂಗಳ

**ರಬಕವಿ-ಬನಹಟ್ಟಿ :** ಉತ್ತರ ಕರ್ನಾಟಕದ 'ಮ್ಯಾಂಚೇಸ್ಟರ್' ಎಂದೇ ಖ್ಯಾತಿ ಪಡೆದಿದ್ದ ರಬಕವಿ-ಬನಹಟ್ಟಿ ಅವಳಿ ಪಟ್ಟಣಗಳು ಇದೀಗ ನವೀಕರಣವಿಲ್ಲದ ಕಾರಣ ಜವಳಿ ಕ್ಷೇತ್ರ ಉಳಿವಿಗಾಗಿ ಹೋರಾಟ ನಡೆಸಬೇಕಾದ ಅನಿವಾರ್ಯತೆ ಎದುರಾಗಿರುವದು ನಿಜಕ್ಕೂ ದುರಂತ ಸ್ಥಿತಿ.

ನೇಕಾರಿಕೆಗೆ ಕಳೆದೆರಡು ಶತಮಾನಗಳ ಇತಿಹಾಸ ಹೊಂದಿರುವ ಈ ಪಟ್ಟಣಗಳು ಇದೀಗಅಳಿವಿನಂಚಿನತೂಗುಯ್ಯಾಲೆಯಲ್ಲಿವೆ. ಒಂದೆಡೆ ಮಾರುಕಟ್ಟೆ ನೆಲೆ ಸಿಗದೆ ವ್ಯಾಪಾರ ಹೀನಾಯ ಸ್ಥಿತಿಯಲ್ಲಿದ್ದರೆ, ಮತ್ತೊಂದೆಡೆ ನವೀಕರಣಗೊಳ್ಳದ ಕಾರಣ ಅದೇ ಓಬೇರಾಯನ ಕಾಲದ ಮಗ್ಗಗಳಿಂದಲೇ ಸೀರೆ ಉತ್ಪಾದನೆ ಸವಾಲಾಗಿದೆ.

**ಬದಲಾಗದ ನೇಯ್ಗೆ :**

ಕೈಮಗ್ಗ ನಂತರ ಅಟೋಮೇಟಿಕ್ ನಂತರ ಪಾವರ್‌ಲೂಮ್‌ಗೆ ಪರಿವರ್ತನೆ ಹೊಂದಿದ್ದ ನೇಕಾರರು ಕಳೆದ 50 ವರ್ಷಗಳಿಂದ ಕಿಂಚಿತ್ತೂ ಬದಲಾವಣೆಯಾಗದೆ ಅದೇ ಹಳೆಯ ಮಗ್ಗಗಳನ್ನೇ ಅವಲಂಬಿತರಾಗಿ ಹೊಸ ನೈಪುಣ್ಯತೆ, ವಿನ್ಯಾಸದೊಂದಿಗೆ ಬದಲಾವಣೆಯಾಗದಿರುವದೇ ಜವಳಿ ಹಿನ್ನಡೆಗೆ ಪ್ರಮುಖ ಕಾರಣ.

**ಸೌಕರ್ಯಗಳಿಲ್ಲ :**

ರಾಜ್ಯಹಾಗುಕೇಂದ್ರಸರ್ಕಾರಗಳುಜವಳಿಪ್ರಧಾನ ಕ್ಷೇತ್ರವಾಗಿರುವ ರಬಕವಿ-ಬನಹಟ್ಟಿ ತಾಲೂಕಿಗೆ ಪೂರಕ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿವಿಫಲಗೊಂಡಿದೆ.ಪ್ರಮುಖವಾಗಿ ಸೈಜಿಂಗ್, ವಾರ್ಪಿಂಗ್, ಕೋನ್ ಡೈಯಿಂಗ್, ನೂಲು ಅದಷ್ಟೇ ಅಲ್ಲದೆ ಜವಳಿ ಪಾರ್ಕ್ ಕೂಡ ಸ್ಥಾಪನೆಗೊಂಡಿಲ್ಲ.

**ಅನ್ಯ ಉದ್ಯೋಗ :**

ಈಗಾಗಲೇ ಅನುಭವ ಹೊಂದಿರುವ ನೇಕಾರ ಮಾಲಿಕರು ಅನ್ಯ ಉದ್ಯೋಗಗಳತ್ತ ಸಾಗಿದ್ದು, ಜವಳಿ ಕ್ಷೇತ್ರದಿಂದ ದೂರವಾಗುವಲ್ಲಿ ಕಾರಣವಾಗಿದ್ದರೆ, ಮತ್ತೊಂದೆಡೆ ದಿನದಿಂದ





ದಿನಕ್ಕೆ ಯುವಕರು ನೇಕಾರಿಕೆಯತ್ತ ಸಾಗುವಲ್ಲಿ ಹಿಂದೇಟು ಹಾಕುತ್ತಿದ್ದಾರೆ.

**ಹೈಟೆಕ್ ಮಗ್ಗಗಳು ಮೂಲೆಗುಂಪು :**

ಹೊಸ ವಿನ್ಯಾಸ, ತಾಂತ್ರಿಕದೊಂದಿಗೆ ರ್‍ಯಾಪಿಯರ್, ಕಂಪ್ಯೂಟರ್ ಜಕಾರ್ಡ್ ಸೇರಿದಂತೆ ಅನೇಕ ಮಗ್ಗಗಳು ಈಗಷ್ಟೇ ಅವಳಿ ನಗರದತ್ತ ದಾಪುಗಾಲು ಹಾಕಿವೆ. ಇವುಗಳ ನಿರ್ವಹಣೆ ದೊಡ್ಡ ಸವಾಲಾಗಿದ್ದು, ನೇಯ್ಗೆಯ ನೈಪುಣ್ಯತೆಗಾರರೂ ದೊರಕದ ಕಾರಣ ಮಾಲಿಕರು ಆರ್ಥಿಕ ಸಂಕಷ್ಟ ಎದುರಿಸುವದರ ಜೊತೆಗೆ ಮಗ್ಗಗಳು ಧೂಳು ತಿನ್ನುವಲ್ಲಿ ಕಾರಣವಾಗಿದ್ದು,ಬೆರಳಣಿಕೆಯಷ್ಟು ಮಾಲಿಕರು ಮಾತ್ರ ಮಗ್ಗಗಳನ್ನು ಖರೀದಿಸಿದ್ದರಿಂದ ಇವರ ಹಾನಿಯಿಂದಾಗಿ ಇತರೆ ಮಾಲಿಕರು ಮಗ್ಗಗಳ ಖರೀದಿಗೆ ಹಿಂದೇಟು ಹಾಕುವಲ್ಲಿ ಕಾರಣವಾಗಿದೆ.

**ಕಚ್ಚಾ ಸಾಮಗ್ರಿ ತಯಾರಿಕಾ ಘಟಕ ನೇಪಥ್ಯಕ್ಕೆ :**

ಸೀರೆ ಉತ್ಪಾದನೆಯಾಗಬೇಕಾದರೆ ಸುಮಾರು ಐದಾರುವಿಭಾಗಗಳಘಟಕಗಳುಅವಶ್ಯವಿದ್ದವು. ಪ್ರಮುಖವಾಗಿ ವಾರ್ಪಿಂಗ್, ಸೈಜಿಂಗ್, ನೂಲು ಸುತ್ತುವಿಕೆ ಸೇರಿದಂತೆ ಅನೇಕವಿದ್ದವು. ಇದೀಗ ಸೀರೆ ನೇಯ್ಗೆಗೆ ಮಾರುಕಟ್ಟೆಯಲ್ಲಿ ತಯಾರಿ ನೂಲು ದೊರಕುತ್ತಿರುವದರಿಂದ ಕಚ್ಚಾ ಸಾಮಗ್ರಿಗಳ ಘಟಕಗಳು ನೇಪಥ್ಯಕ್ಕೆ ಸರಿಯುವಲ್ಲಿ ಕಾರಣ.

**ಅಸಂಘಟಿತ :**

ಹಲವಾರು ಸಮಸ್ಯೆಗಳನ್ನು ಹೊತ್ತು ನಿಂತಿರುವ ಜವಳಿ ಕ್ಷೇತ್ರಕ್ಕೆ ಅಸಂಘಟನೆಯಿಂದ ಹೋರಾಟ ಅಥವಾ ಬೇಡಿಕೆಗಳಿಗೆ ಸ್ಪಂದನೆಗೆ ಸಮಸ್ಯೆ ಎದುರಾಗಿದೆ. ಪ್ರತಿ ಬಾರಿ ಸರ್ಕಾರದ ವಿರುದ್ಧ ಸಿಡಿದೇಳುತ್ತಿದ್ದ ನೇಕಾರರು ಕಳೆದೊಂದು ದಶಕದಿಂದ ಪ್ರಖರ ಹಾಗು ಪ್ರಮುಖ ಹೋರಾಟಗಳಿಂದ ದೂರ ಉಳಿಯುವಲ್ಲಿ ಕಾರಣವಾಗಿದೆ.

**ಯೋಜನೆಗಳಿಗೆ ಸೀಮಿತ :**

ಸರ್ಕಾರ ಕೊಡಮಾಡುವ ಯೋಜನೆಗಳಿಗೆ ಸೀಮಿತಗೊಂಡಿರುವ ನೇಕಾರರು ತಮ್ಮ ಕಾಯಕದ ನಿಷ್ಠೆ ಹಾಗು ಪ್ರಯತ್ನ ತೋರುವಲ್ಲಿ ವೈಫಲ್ಯ ಕಾಣುವಲ್ಲಿ ಕಾರಣವಾಗಿದ್ದು, ನೆರೆಯ ರಾಜ್ಯಗಳಲ್ಲಿನ ಅತಿ ವೇಗದ ಉದ್ಯೋಗ ಕ್ರಾಂತಿಗೆ ಕಿಂಚಿತ್ತೂ ಪೈಪೋಟಿ ಒಡ್ಡುವಲ್ಲಿ ಇಚ್ಛಾಶಕ್ತಿ ತೋರದಿರುವದು ವಿಪರ್ಯಾಸ.

**ಮಗ್ಗಗಳು 20 ರಿಂದ 6 ಸಾವಿರಕ್ಕೆ :**

2005 ಕ್ಕಿಂತಲೂ ಮೊದಲು ಸುಮಾರು 20 ಸಾವಿರಗಳಷ್ಟು ಮಗ್ಗಗಳನ್ನು ಹೊಂದಿದ್ದ ರಬಕವಿ-ಬನಹಟ್ಟಿ ಪಟ್ಟಣಕ್ಕೆ ಕಾಲಿಟ್ಟರೆ ಸಾಕು ಮಗ್ಗಗಳ ಶಬ್ದದಿಂದಲೇ ತುಂಬುತ್ತಿತ್ತು. ಇದೀಗ ಕೇವಲ 6 ಸಾವಿರಕ್ಕೆ ಇಳಿಕೆ ಕಂಡು ಪಟ್ಟಣದ ಮಧ್ಯಭಾಗದಲ್ಲಂತು ಮಗ್ಗಗಳಿಗೆ ಹುಡುಕಾಟ ನಡೆಸಬೇಕಾದ ಸ್ಥಿತಿಯಾಗಿದೆ.

ಒಟ್ಟಾರೆ ಜವಳಿ ಕ್ಷೇತ್ರದಿಂದ ಮಂಕಾಗುವಲ್ಲಿ ಕಾರಣವಾಗುತ್ತಿರುವ ಈ ಭಾಗದ ನೇಕಾರರಿಗೆ ಸ್ವಯಂ ತಯಾರಿ ಜೊತೆಗೆ ಸರ್ಕಾರವೂ ಕೈ ಜೋಡಿಸಿದ್ದಲ್ಲಿ ಮೊದಲಿನ ಗತವೈಭವ ಮರುಕಳಿಸಲಿದೆ. ಇಲ್ಲವಾದಲ್ಲಿ ಮಗ್ಗಗಳ ಸಂಖ್ಯೆಯೊಂದಿಗೆ ನೇಕಾರರ ಸಂಖ್ಯೆಯೂ ಕಡಿಮೆಯಾಗುವದರೊಂದಿಗೆ ಸಂಪೂರ್ಣ ಅವನತಿ ಕಾಣುವಲ್ಲಿ ಎರಡು ಮಾತಿಲ್ಲ.

# ಕಂಚಿನ ಕಂಠದ ಕಲಾವಿದೆ ರೇಷ್ಮಾ ಅಳವಂಡಿ







ಕಲಾವಿದರತವರುಎನಿಸಿಕೊಂಡಿರುವಇಳಕಲ್ ನಗರದ ಕಲಾವಿದರೆಲ್ಲ ಚಿಕ್ಕವಯಸ್ಸಿನಲ್ಲಿ ಬಣ್ಣ ಹಚ್ಚಿಕೊಂಡು ರಂಗ ಪರದೆಯ ಮುಂದೆ ನಿಂತವರು ಸಾಕಷ್ಟು ಜನರಿದ್ದಾರೆ. ಅದರಲ್ಲಿ ಇಳಕಲ್ಲಿನ ರೇಷ್ಮಾ ಚಮನಸಾಬ್ ಅಳವಂಡಿ ಅವರು ಕಂಚಿನ ಕಂಠದಿಂದ ಸ್ಪಷ್ಟವಾಗಿ ಮಾತನಾಡುವ ನೃತ್ಯದಲ್ಲಿ ತನ್ನನ್ನು ತಾನೇ ಮರೆಯುವಂತಿರುವ ಕಲಾವಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

ತಾಯಿ ಮಮತಾಜಬೇಗಂ ತಂದೆ ಅಪ್ಪಸಾಬ್ ಇಟಗಿ ಅವರ ಮಗಳಾಗಿ 5 –7–1978 ರಲ್ಲಿ ಜನಿಸಿ ಕನ್ನಡ ಭಾಷೆಯಲ್ಲಿ 7ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿ ಹತ್ತನೇ ವರ್ಷದಲ್ಲಿ ಬಾಲ ನಟಳಾಗಿ ಮಂಗಳಾ ನನ್ನ ಅತ್ತಿಗೆ ಎಂಬ ನಾಟಕದಲ್ಲಿ ಅಭಿನಯಿಸುವ ಮೂಲಕ ವೃತ್ತಿ ರಂಗಭೂಮಿಯ ಕಲಾವಿದೆಯಾಗಿ ರಂಗ ಪ್ರವೇಶ ಮಾಡಿದರು ಇವರ ಮಾತು, ನೃತ್ಯ, ಹಾಸ್ಯ ನಟನೆಯನ್ನು ನೋಡಿದರೆ ಎಂತವ–ರಿಗೂ ಬೆರಗನ್ನು ಮೂಡಿಸುವಂತದ್ದಾಗಿದೆ ಆರ್ಥಿಕ ಪರಿಸ್ಥಿತಿಯಿಂದಾಗಿ ಓದಲು ಮುಂದುವರಿಸಲಾಗದೆ ಒಡಹುಟ್ಟಿದವರು ವಿದ್ಯಾಭ್ಯಾಸಕ್ಕಾಗಿ ತನ್ನ ವ್ಯಾಸಂಗಕ್ಕೆ ತಿಲಾಂಜಲಿ ಹೇಳಿದರು.

ಚಿಕ್ಕ ವಯಸ್ಸಿನಲ್ಲಿದ್ದಾಗಲೇ ಡಾಕ್ಟರ್ ಅಥ–'ವಾ ಸಂಗೀತಗಾರ್ತಿ ಆಗಬೇಕೆನ್ನುವ ಮಹಾದಾಸೆಯನ್ನು ಇಟ್ಟುಕೊಂಡಿದ್ದರು ಜೀವನ ಎಂಬುದು ದೇವರು ನಡೆಸುವಂತೆ ಭೂಮಿ ಒಂದು ರಂಗ ಮಂದಿರ ನಾವು ಅದರ ಪಾತ್ರಧಾರಿಗಳಾಗಿದ್ದೇವೆ ಅವನು ಹೇಳಿದಂತೆ ನಾವು ಕೇಳಬೇಕಾಗುತ್ತದೆ ಇದೆ ವಿಧಿಯಾಟದ ಮುಂದೆ ಏನು ನಡೆಯುವುದಿಲ್ಲ ಎನ್ನುವ ಪರಿಸ್ಥಿತಿ ತಮಗೆ ಬಂದೊದಗಿತು ಆರ್ಥಿಕ ಪರಿಸ್ಥಿತಿಯಿಂದಾಗಿ ಮುಂದೆ ಓದಲಾಗದೆ ವ್ಯಾಸಂಗಕ್ಕೆ ತಿಲಾಂಜನಿಯನ್ನು ಇಟ್ಟರು.

ರಂಗಭೂಮಿ ಕಲಾವಿದರು ಕಥೆಗಾರರಾದ ಪಿ.ಬಿ. ದುತ್ತರಗಿ, ರೈಮನ್‌ಸಾಬ್ ಶಿರಹಟ್ಟಿ, ಚಿದಾನಂದಪ್ಪ ಸಪ್ಪಂಡಿ, ಸರೋಜಮ್ಮ ದುತ್ತರಗಿ, ದೃವರಾಜ ದೇಶಪಾಂಡೆ ತಮಗೆ ಮಾರ್ಗದರ್ಶಕರಾಗಿ ಕಲೆಯನ್ನು ಧಾರೆಯಾಗಿ ಎರೆದು ಕೊಟ್ಟಿದ್ದಾರೆ.

ಮಂಗಳ ನನ್ನ ಅತ್ತಿಗೆ ನಾಟಕದಲ್ಲಿ ಪುರುಷರ ಪಾತ್ರದಲ್ಲಿ ಮಿಂಚಿದ್ದು ವಿಶೇಷವಾಗಿತ್ತು ವೃತ್ತಿರಂಗಭೂಮಿಯನಾಟಕಗಳಾದಸಂಪತ್ತಿಗೆ ಸವಾಲ್, ಮಲಮಗಳು, ಸುಖದ ಸುಪ್ಪತ್ತಿಗೆ, ಇಳಕಲ್ ಸೀರೆ, ವಿಜಯ ಮಹಾಂತೇಶ್ವರ ಮಹಾತ್ಮೆ, ಹರಗಿರಿಜೆ, ತಾಯಿಯ ಕರುಳು, ಸಿಂಧೂರ್ ಲಕ್ಷ್ಮಣ, ನೀನು ಸೌಕಾರ, ವರ ನೋಡಿ ಹೆಣ್ಣುಕೊಡು, ಕೊಂಡು ತಂದ ಗಂಡ, ಸಂತ ಶಿಶುನಾಳ ಶರೀಫ, ನವಲಗುಂದ ನಾಗಲೀಲೆ ಭಕ್ತಿ ಪ್ರಧಾನ ನಾಟಕಗಳಾದರೆ ಪೌರಾಣಿಕ ನಾಟಕಗಳಾಗಿ ಕುರುಕ್ಷೇತ್ರ, ಚಿತ್ರಾಂಗದೆ, ರಕ್ತರಾತ್ರಿ ಇನ್ನಿತರ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಸ್ನೇಹರಂಗ ಹವ್ಯಾಸಿ ಕಲಾ ಸಂಸ್ಥೆಯೊಂದಿಗಿನ ಸಂಪರ್ಕದಲ್ಲಿ ಹೊಸ ಅಲೆ ನಾಟಕಗಳಾದ ನಾಗಮಂಡಲ, ಸಿರಿಸಂಪಿಗೆ, ತಲೆದಂಡ, ಗಿಡ್ಡು ಟೇಲರ್ ಚಡ್ಡಿ ಸ್ಪೆಷಾಲಿಟಿ ಹಾಗೂ ಬಾಗಲಕೋಟೆಯ ಜಲ ಮಿತ್ರ ಮಂಡಳಿಯ ವೀರ ವೈರಾಗ್ಯ ಮಲ್ಲಣ್ಣಚಾರ್ಯರು, ಜಗದ್ಗುರು ಇಬ್ರಾಹಿಂ ಇನ್ನಿತರ ಹಲವಾರು ನಾಟಕಗಳನ್ನು ಪ್ರದರ್ಶನ ನೀಡುವ ಮೂಲಕ ತಮ್ಮ ಕಲಾ ಪ್ರೌಢಿಮೆಯನ್ನು ಮೆರೆದಿದ್ದಾರೆ.

ನಾಟಕ ಕಂಪನಿಗಳು: ಪಿ.ಬಿ. ದುತ್ತರಗಿ ಅವರ ಒಡೆತನದ ವಿಜಯ ನಾಟ್ಯ ಸಂಘ ಸುಳಿಭಾವಿ, ಘನ ಮಠಾಧೀಶ್ವರ ನಾಟ್ಯ ಸಂಘ ಕುಂಟೋಜಿ, ಕುಮಾರೇಶ್ವರ ನಾಟ್ಯ ಸಂಘ ಹಾನಗಲ್, ವಿಶ್ವಜ್ಯೋತಿ ಪಂಚಾಕ್ಷರಿ ನಾಟ್ಯ ಸಂಘ ಗದಗ, ಶ್ರೀ ಬೀರೇಶ್ವರ ನಾಟ್ಯ ಸಂಘ ನಾಲತವಾಡ, ಶ್ರೀ ಶಿರಡಿ ಸಾಯಿಬಾಬಾ ನಾಟ್ಯ ಸಂಘ ಕೊಡೆಕಲ್, ಶ್ರೀ ಗುರು ಕುಮಾರೇಶ್ವರ ನಾಟ್ಯ ಸಂಘ ನವಲಗುಂದ, ಕುಮಾರ ವಿಜಯ ನಾಟ್ಯ ಸಂಘ ಚಿತ್ತರಗಿ, ಸ್ವಾಮಿ ಸಮರ್ಥ ಕಲಾಸಂಘ ಅಕ್ಕಲಕೋಟ, ಶ್ರೀಕಾಂತೇಶ್ವರ ನಾಟ್ಯ ಸಂಘ ತಾಳಿಕೋಟಿ, ಶ್ರೀ ಚನ್ನ ವೀರೇಶ್ವರ ನಾಟ್ಯ ಸಂಘ ಬಬಲಾದಿ, ಶ್ರೀ ಸಂಗಮೇಶ್ವರ ನಾಟ್ಯ ಸಂಘ ಆಶಾಪುರ ಮೊದಲಾದ ನಾಟಕ ಕಂಪನಿಗಳು ಆಡಿಸುವ ನಾಟಕಗಳಲ್ಲಿ ಅಭಿನಯಿಸಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಪ್ರಶಸ್ತಿ ಗೌರವಗಳು: ನಾಟಕ ಅಕಾಡೆಮಿ ಬೆಂಗಳೂರು, ಸುವರ್ಣ ಕರ್ನಾಟಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಾಗಲಕೋಟೆ, ರಂಗಭೂಮಿ ಕಲಾವಿದರ ಸಂಘದಿಂದ, ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಳ್ಳಾರಿ, ಪರಿಹಾರ ವೇದಿಕೆ ಗುಬ್ಬಿ ವೀರಣ್ಣ ಪ್ರಶಸ್ತಿ ಪುರಸ್ಕೃತ ದಿಂ. ಟಿ. ಹೆಚ್. ಅರಸು ಅವರ ಸ್ಮರಣೆ ನಾಟಕದಲ್ಲಿ ಬಾಗಲಕೋಟೆ ಜಲಮಿತ್ರ ಕಲಾ ರಂಗವೇದಿಕೆ, ಹೀಗೆ ಅವರ ಕಲಾ ಪ್ರತಿಭೆಗೆ ,ಕೌಶಲ್ಯವನ್ನು ಕಂಡು ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿ ಅವರ ಕಲಾ ಪ್ರತಿಭೆಗೆ ಸ್ಪೂರ್ತಿ ನೀಡಿದ್ದಾರೆ.

ರೇಷ್ಮಾ ಅಳವಂಡಿ ಅವರು ಸ್ವತಃ ಅನೇಕ ಕಲಾವಿದರನ್ನು ಕಲಾ ಪ್ರೇಮಿಗಳನ್ನು ಕೂಡಿಸಿಕೊಂಡು ರಂಗಸಂಗಮ ಕಲೆ ಮತ್ತು ಸಾಂಸ್ಕೃತಿಕ ಸಂಘವನ್ನು ಹುಟ್ಟು ಹಾಕುವ ಮೂಲಕ ಸಂಸ್ಥಾಪಕ ಅಧ್ಯಕ್ಷರಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ.

ರಂಗಭೂಮಿಯ ನಾಟಕದಲ್ಲಿ ಬರುವ ಪಾತ್ರಗಳಲ್ಲಿ ನಾವು ಸುಖ ಜೀವನಗಳು ಅಲ್ಲಿ ಬರುವ ಪಾತ್ರಗಳಲ್ಲಿ ರಾಜ, ರಾಣಿ ,ಶ್ರೀಮಂತ ಹಾಸ್ಯವಾಗಿ ಸುಖ ಜೀವನವನ್ನು ಮೂರು ಗಂಟೆಗಳ ಕಾಲ ಅನುಭವಿಸುತ್ತೇವೆ ರಂಗದಿಂದ ಕೆಳಗೆ ಇಳಿದಾಗ ಅದೇ ದುಃಖಸಾಗರ ಅದೇ ಪರದಾಟ ಜೀವನ. ನೆನಪುಗಳು ಹೀಗೆ ರಂಗ ಕಲಾವಿದರ ಬದುಕು ಎಂದು ರೇಷ್ಮಾ ಅಳವಂಡಿ ಅವರುದುಃಖದಿಂದಮನದಾಳಮಾತುಗಳನ್ನು ಹಂಚಿಕೊಳ್ಳುತ್ತಾರೆ. ರೇಷ್ಮಾ ಅಳವಂಡಿಂ–ಯವರ ಕಲಾ ಯಾತ್ರೆ ನಾಡಿನಾದ್ಯಂತ ಸಾಗಲಿ, ಧಾರಾವಾಹಿ ಮತ್ತು ಚಲನಚಿತ್ರಗಳಲ್ಲಿ ಕೂಡ ಅವರಿಗೆ ಹೆಚ್ಚಿನ ಪಾತ್ರಗಳಲ್ಲಿ ಅವಕಾಶಗಳು ಲಭಿಸಲಿ ಎನ್ನುತ್ತಾ ಶುಭ ಹಾರೈಸುವೆ.

* * *



**ಲೇಖಕ**
**ಮಹಾಂತೇಶ ಗೊರಜನಾಳ**
**ಪತ್ರಕರ್ತರು, ಇಳಕಲ್**

# ಉಚಿತ ನೇತ್ರ ಶಸ್ತ್ರ ಚಿಕಿತ್ಸೆ ಪುಣ್ಯದ ಕೆಲಸ–ಬಡವರಿಗೆ ಉಚಿತ ನೇತ್ರ ಶಸ್ತ್ರ ಚಿಕಿತ್ಸೆ ಕಾರ್ಯಕ್ರಮ

**ಗುಳೇದಗುಡ್ಡ :** ದಾನಿಗಳ ಸಹಕಾರದೊಂದಿಗೆ ಉಚಿತ ನೇತ್ರ ತಪಾಸಣೆ, ಕನ್ನಡಕ ವಿತರಣೆ ಹಾಗೂ ಅಗತ್ಯ ಬಿದ್ದ ಜನರಿಗೆ ಉಚಿತ ನೇತ್ರ ಶಸ್ತ್ರ ಚಿಕಿತ್ಸೆ ಶಿಬಿರ ನಡೆಯುವುದು ಪುಣ್ಯದ ಕೆಲಸ. ಬಡವರಿಗೆ ಇದರಿಂದ ಬಹಳಷ್ಟು ಸಹಕಾರ ಆಗಲಿದೆ. ಮರ್ದಾ ಬಂಧುಗಳು ಬಡವರ ಆರೋಗ್ಯ ದೃಷ್ಟಿಯಿಂದ ಈ ಶಿಬಿರ ಆಯೋಜನೆ ಮಾಡಿದ್ದು ಶ್ಲಾಘನೀಯ. ನೇತ್ರಗಳು ಮನುಷ್ಯನ ದೇಹದ ಮಹತ್ವದ ಅಂಗಗಳು ಎಂದು ಡಾ.ರಾಜಗೋಪಾಲ ಝುಂವರ ಹೇಳಿದರು.

ಅವರು ಪಟ್ಟಣದ ಹೊಸ ಬಾಲಾಜಿ ಪಂಚಾಯತ್ ವಾಡಾದಲ್ಲಿ ಹಾರ್ದಿಕ ಟೆಕ್ಸ್‌ಟೈಲ್ಸ್ ಬೆಂಗಳುರು ಹಾಗೂ ಡಾ.ಆರ್.ಜಿ. ಕಾರುಡಗಿಮಠ ಮೆಮೋರಿಯಲ್ ನರ್ಸಿಂಗ್ ಆಸ್ಪತ್ರೆ ಬಾದಾಮಿ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ನೇತ್ರ ತಪಾಸಣೆ ಶಿಬಿರ, ಉಚಿತ ಕನ್ನಡಕ ವಿತರಣೆ ಹಾಗೂ ಉಚಿತ ಶಸ್ತ್ರ ಚಿಕಿತ್ಸೆ ಶಿಬಿರ ಉದ್ಘಾಟಿಸಿ ಮಾತನಾಡಿ, ಒಂದು ಸಂಸ್ಥೆ ವತಿಯಿಂದ ಉಚಿತವಾಗಿ




ಬಡವರಿಗೆ ನೆರವಾಗಲೆಂದು ಉಚಿತವಾಗಿ ನೇತ್ರ ತಪಾಸಣೆ, ಕನ್ನಡಕ ವಿತರಣೆ ಹಾಗೂ ಶಸ್ತ್ರ ಚಿಕಿತ್ಸೆ ಮಾಡುತ್ತಿದ್ದು ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದರು.

ಹಾರ್ದಿಕ ಟೆಕ್ಸ್‌ಟೈಲ್ಸ್ ಬೆಂಗಳುರು ನಿರ್ದೇಶಕ ರಾಜಗೋಪಾಲ ಮರ್ದಾ, ಡಾ.ಪ್ರದೀಪ ನಂದಿ, ಡಾ.ಪೂಜಾ ರಾಠೋಡ, ಡಾ.ರಾಜಗೋಪಾಲ ಝುಂವರ, ನಾರಾಯಣದಾಸ ಮುಂದಡಾ, ಮಾಹೇಶ್ವರಿ ಸಮಾಜದ ಹಿರಿಯರಾದ ಬಂಟಕಲಾಲಜಿ ದೂತ, ಡಾ.ಸಂದೇಶ ಕಾರುಡಗಿಮಠ, ಜುಗಲ್‌ಕಿಶೋರ ಮರ್ದಾ, ಕಮಲಕಿಶೋರ ಮಾಲಪಾಣಿ, ಬಿಹಾರಿಲಾಲ ಮರ್ದಾ, ಶ್ರೀರಾಮ ಮರ್ದಾ, ಶ್ರೀನಿವಾಸ ಕಾಬ್ರಾ, ರಾಜಶೇಖರ ಪಾಟೀಲ, ದ್ವಾರಕಾದಾಸ ಮರ್ದಾ ಇತರರು ಇದ್ದರು.

ಶಿಬಿರದಲ್ಲಿ 150 ಕ್ಕೂ ಹೆಚ್ಚು ಜನರ ನೇತ್ರ ತಪಾಸಣೆ, ಉಚಿತ ಕನ್ನಡಕ ವಿತರಿಸಲಾಯಿತು.

ಮತ್ತು 70 ಕ್ಕೂ ಹೆಚ್ಚು ಬಡ ಜನರ ಕಣ್ಣಿನ ಶಸ್ತ್ರ ಚಿಕಿತ್ಸೆಗೆ ಹೆಸರು ನೊಂದಾವಣಿ ಮಾಡಿಕೊಳ್ಳಲಾಯಿತು.

# ಸಾಂತ್ವನ ಕೇಂದ್ರಕ್ಕೆ ಪ್ರಸ್ತಾವಣೆ ಸಲ್ಲಿಕೆ

**ಬಾಗಲಕೋಟೆ :** ಜಮಖಂಡಿ ನಗರದಲ್ಲಿ ಮಹಿಳಾ ಸಾಂತ್ವನ ಕೇಂದ್ರವನ್ನು ಪ್ರಾರಂಭಿಸಲು ಮಹಿಳಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಅನುಭವನ ಹೊಂದಿರುವ, ನೋಂದಣಿಯಾಗಿ 3 ವರ್ಷಗಳಾಗಿರುವ ಅರ್ಹ ಸಂಸ್ಥೆಗಳಿಂದ ಪ್ರಸ್ತಾವನೆ ಸಲ್ಲಿಸಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಸಂಘ–ಸಂಸ್ಥೆಯವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿ ಬಾಗಲಕೋಟೆ ಇವರಿಂದ ಅರ್ಜಿ ನಮೂನೆ ಪಡೆದುಕೊಂಡು ಅಗತ್ಯ ದಾಖಲೆಗಳೊಂದಿಗೆ ಅಕ್ಟೋಬರ 30 ರೊಳಗಾಗು ಸಲ್ಲಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಉಪನಿರ್ದೇಶಕ ಪ್ರಭಾಕರ ಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ದೂಸಂ.08354–297708 ಅಥವಾ ಶಿಶು ಅಭಿವೃದ್ದಿ ಯೋಜನಾಧಿಕಾರಿಗಳ ಕಚೇರಿ, ಜಮಖಂಡಿ ಅವರನ್ನು ಸಂಪರ್ಕಿಸಬಹುದಾಗಿದೆ.

# ಒಳಾಂಗಣ ವಾಸ್ತುಶಿಲ್ಪ ಮತ್ತು ಹಾರ್ಡ್ ವೇರ್ ಪರಿಹಾರಗಳನ್ನು ನೀಡಲು ಬೆಂಗಳೂರಿನಲ್ಲಿ ಜಪಾನ್‌ನ ಸುಗತ್ಸುನ್ ಕೇಂದ್ರ ಪ್ರಾರಂಭ



**ಬೆಂಗಳೂರು :** ಒಳಾಂಗಣ ವಾಸ್ತುಶಿಲ್ಪ ಮತ್ತು ಹಾರ್ಡ್ ವೇರ್ ಪರಿಹಾರಗಳನ್ನು ನೀಡಲು ಬೆಂಗಳೂರಿನಲ್ಲಿ ಜಪಾನ್ ನ ಸುಗತ್ಸುನ್ ಕೇಂದ್ರ ಪ್ರಾರಂಭವಾಗಿದೆ. ಸುಗತ್ಸುನ್ ಜಪಾನ್ ನ ಪ್ರಮುಖ ಹಾರ್ಡ್‌ವೇರ್ ವಾಸ್ತುಶಿಲ್ಪ ಪರಿಹಾರಗಳು ಮತ್ತು ಕೈಗಾರಿಕಾ ಘಟಕ ಹಾರ್ಡ್‌ವೇರ್‌ನ ಪ್ರಮುಖ ಜಪಾನಿನ ತಯಾರಕ ಸಂಸ್ಥೆಯಾಗಿದೆ.

ಸುಗುತ್ಸನ್ ಇದೀಗ ಬೆಂಗಳೂರಿನ ಯೂನಿಟಿ ಬಿಲ್ಡಿಂಗ್ಸ್ ಕಾಂಪ್ಲೆಕ್ಸ್, ಸಿಲ್ವರ್ ಜುಬಿಲಿ ಬ್ಲಾಕ್, ಗ್ರೌಂಡ್ ಫ್ಲೋರ್, ಮಿಷನ್ ರೋಡ್, ಖಖಖ ಕ್ರಾಸ್ ನಲ್ಲಿ ತನ್ನ ಹೊಸ ಅನುಭವ ಕೇಂದ್ರವನ್ನು ಪ್ರಾರಂಭಿಸಿದೆ.

ಜಪಾನ್‌ನಲ್ಲಿ 1930 ರಲ್ಲಿ ಸ್ಥಾಪನೆಯಾದ ಈ ಅತ್ಯಾಧುನಿಕ ಸೌಲಭ್ಯವನ್ನು ಸುಗಟ್ಸುನ್ ಸಂಸ್ಥೆ ವ್ಯಾಪಕ ಶ್ರೇಣಿಯ ಉತ್ಪನ್ನಗಳನ್ನು ಪ್ರದರ್ಶಿಸಲು ವಿನ್ಯಾಸಗೊಳಿಸಲಾಗಿದೆ. ಇದು ನಿಖರವಾದ ತಂತ್ರಜ್ಞಾನ, ಬಾಳಿಕೆ ಮತ್ತು ಗುಣಮಟ್ಟದ ಕರಕುಶಲತೆಯನ್ನು ಒಳಗೊಂಡಿರುವ ಕಂಪನಿಯಾಗಿದ್ದು, ತನ್ನ ಬದ್ಧತೆಯ ಪ್ರತೀಕವಾಗಿದೆ. ಸುಗತ್ಸುನ್ 16 ವರ್ಷಗಳಿಂದ ಭಾರತೀಯ ಮಾರುಕಟ್ಟೆಯಲ್ಲಿ ತನ್ನ ಪರಿಣಿತಿಯನ್ನು ಹೊಂದಿದೆ ಮತ್ತು ಉತ್ತಮ ಗುಣಮಟ್ಟದ ಹಾರ್ಡ್‌ವೇರ್ ಪರಿಹಾರಗಳನ್ನು ಒದಗಿಸುತ್ತಿದೆ. ಅನುಭವ ಕೇಂದ್ರವು ಹಿಂಜ್‌ಗಳು, ಲಾಕ್‌ಗಳು, ಡ್ರಾಯರ್ ಸ್ಲೈಡ್‌ಗಳು, ಪಾಕೆಟ್ ಡೋರ್ ಸಿಸ್ಟಮ್‌ಗಳು ಒಳಗೊಂಡಂತೆ ಸುಗಟ್ಸುನ್‌ನ ಸಮಗ್ರ ಶ್ರೇಣಿಯ ನವೀನ ಹಾರ್ಡ್‌ವೇರ್ ಪರಿಹಾರಗಳನ್ನು ಒಳಗೊಂಡಿದೆ. ಈ ಹೊಸ ಸ್ಥಳವು ವಾಸ್ತುಶಿಲ್ಪಿಗಳು, ವಿನ್ಯಾಸಕರು ಮತ್ತು ಗ್ರಾಹಕರು ತಮ್ಮ ಯೋಜನೆಗಳಿಗೆ ಸ್ಫೂರ್ತಿ ಹಾಗೂ ಪ್ರಾಯೋಗಿಕ ಪರಿಹಾರಗಳನ್ನು ನೀಡುವ ಮೂಲಕ ಅತ್ಯಾಧುನಿಕ ಉತ್ಪನ್ನಗಳನ್ನು ನೇರವಾಗಿ ಅನ್ವೇಷಿಸಲು ಸಹಕಾರಿಯಾಗಿದೆ.

ನೂತನ ಸುಗತ್ಸುನ್ ಅನುಭವ ಕೇಂದ್ರವನ್ನು ಅರ್. ಗಣೇಶ್ ಕುಮಾರ್ ಮತ್ತು ಅರ್. ಕಿರಣ್ ಗಾಲಾ ಜೊತೆಗೆ ಸುಗತ್ಸುನ್ ವ್ಯವಸ್ಥಾಪಕ ನಿರ್ದೇಶಕ ಅನಿಲ್ ರಾಣಾ ಅವರು ಸ್ಥಾಪಿಸಿದ್ದು, ಬೆಂಗಳೂರು ಅನುಭವ ಕೇಂದ್ರವು ದಕ್ಷಿಣ ಭಾರತದಲ್ಲಿ ಬೆಳೆಯುತ್ತಿರುವ ಗ್ರಾಹಕರ ನೆಲೆಯನ್ನು ಪೂರೈಸುವ ಕಾರ್ಯತಂತ್ರದ ನೆಲೆಗೊಂಡಿದೆ. ಇದು ಮುಂಬೈ, ದೆಹಲಿ, ಚೆನ್ನೈ ಮತ್ತು ಪುಣೆಯಲ್ಲಿ ಅಸ್ತಿತ್ವದಲ್ಲಿರುವ ಕೇಂದ್ರಗಳಿಗೆ ಪೂರಕವಾಗಿದೆ. ಮಾರುಕಟ್ಟೆಯಲ್ಲಿ ಸುಗಟ್ಸುನ್ ತನ್ನ ವ್ಯಾಪಕತೆಯನ್ನು ಬಲಪಡಿಸುತ್ತದೆ. ಸುಧಾರಿತ ಹಾರ್ಡ್‌ವೇರ್ ಪರಿಹಾರಗಳನ್ನು ಒದಗಿಸುವುದರ ಮೇಲೆ ಇದು ಕೇಂದ್ರೀಕೃತಗೊಂಡಿದೆ.

ಸುಗತ್ಸುನ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಅನಿಲ್ ರಾಣಾ ಮಾತನಾಡಿ, "ಇಂದು ಭಾರತದಲ್ಲಿ ಸುಗತ್ಸುನ್ ನ ಮಹತ್ವದ ಹೆಜ್ಜೆಯನ್ನು ಗುರುತಿಸಲಾಗಿದೆ. ಬೆಂಗಳೂರಿನಲ್ಲಿರುವ ನಮ್ಮ ಹೊಸ ಅನುಭವ ಕೇಂದ್ರ ಕೇವಲ ಶೋರೂಂ ಅಲ್ಲ; ಇದು ಸೃಜನಶೀಲತೆ ಕಾರ್ಯವನ್ನು ಪೂರೈಸುವ ಸ್ಥಳವಾಗಿದೆ. ಈ ಹೊಸ ಕೇಂದ್ರವು ಭಾರತದಾದ್ಯಂತ ಸುಗತ್ಸುನ್ ನ ಮುಂದುವರಿದ ವಿಸ್ತರಣೆಯಲ್ಲಿ ಮಹತ್ವದ ಮೈಲಿಗಲ್ಲನ್ನು ಗುರುತಿಸುತ್ತದೆ. ದಕ್ಷಿಣ ಪ್ರದೇಶದಲ್ಲಿ ನಮ್ಮ ಉಪಸ್ಥಿತಿಯನ್ನು ಇನ್ನಷ್ಟು ಬಲಪಡಿಸುತ್ತದೆ. ನಮ್ಮ ಗ್ರಾಹಕರಿಗೆ ನಮ್ಮ ಉತ್ಪನ್ನಗಳೊಂದಿಗೆ ಕೈ ಜೋಡಿಸಲು ಮತ್ತು ಅವರು ತಮ್ಮ ಯೋಜನೆಗಳನ್ನು ಹೇಗೆ ಹೆಚ್ಚಿಸಬಹುದು ಎಂಬುದನ್ನು ಕಂಡುಕೊಳ್ಳಲು ಅವಕಾಶ ಒದಗಿಸಲು ನಾವು ಉತ್ಸುಕರಾಗಿದ್ದೇವೆ ಎಂದರು.

ಸುಗಟ್ಸುನ್ ತಂಡವು ಸಮುದಾಯದೊಂದಿಗೆ ತೊಡಗಿಸಿಕೊಳ್ಳಲು ಉತ್ಸುಕವಾಗಿದೆ, ಕ್ಲೈಂಟ್‌ಗಳೊಂದಿಗೆ ಶಾಶ್ವತ ಸಂಬಂಧಗಳನ್ನು ಬೆಳೆಸುವಾಗ ಸ್ಥಳಗಳು ಮತ್ತು ಯೋಜನೆಗಳನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಸುಗತ್ಸುನ್ ಬೆಂಗಳೂರು ಅನುಭವ ಕೇಂದ್ರಕ್ಕೆ ಭೇಟಿ ನೀಡಲು ಮತ್ತು ಅದರ ಅಸಾಧಾರಣ ಹಾರ್ಡ್‌ವೇರ್ ಪರಿಹಾರಗಳು ತಮ್ಮ ಸ್ಥಳಗಳು ಮತ್ತು ಯೋಜನೆಗಳನ್ನು ಹೇಗೆ ಉನ್ನತೀಕರಿಸಬಹುದು ಎಂಬುದನ್ನು ಕಂಡುಕೊಳ್ಳಲು ಪ್ರತಿಯೊಬ್ಬರನ್ನು ಆಹ್ವಾನಿಸುತ್ತದೆ.

ಜಾಲತಾಣ : https://global.sugatsune.com/in/en/

**ವಿಳಾಸ: ಸುಗತ್ಸುನ್ ಕೊಗ್ಯೋ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಯೂನಿಟಿ ಬಿಲ್ಡಿಂಗ್ಸ್ ಕಾಂಪ್ಲೆಕ್ಸ್, ಸಿಲ್ವರ್ ಜುಬಿಲೀ ಬ್ಲಾಕ್, ಗ್ರೌಂಡ್ ಫ್ಲೋರ್, ಮಿಶನ್ ರೋಡ್, ಖಖಖ ಕ್ರಾಸ್, ಬೆಂಗಳೂರು 560027**

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ದೇವಸ್ಥಾನ ಜೀರ್ಣೋದ್ದಾರಕ್ಕೆ 1.50 ಲಕ್ಷ ರೂ. ನೆರವು

**ವಿಜಯಪುರ :** ವಿಜಯಪುರ 2 ತಾಲ್ಲೂಕಿನ ತಿಕೋಟಾ ವಲಯದ ಹರನಾಳ ಕಾರ್ಯಕ್ಷೇತ್ರದ ಶ್ರೀ ಲಕ್ಕಮ್ಮದೇವಿ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಧರ್ಮಾಧಿಕಾರಿ ಡಾ. ವಿ.ವೀರೇಂದ್ರ ಹೆಗ್ಗಡೆ ಅವರು ಬಿಡುಗಡೆ ಮಾಡಿದ 1.50 ಲಕ್ಷ ರೂ.ಗಳ ಡಿಡಿಯನ್ನು ಯೋನೆಯ ಜಿಲ್ಲಾ ನಿರ್ದೇಶಕ ಸಂತೋಷ ಕುಮಾರರೈಅವರುಬುಧವಾರದೇವಸ್ಥಾನದ ಸಮಿತಿಯವರಿಗೆ ಹಸ್ತಾಂತರಿಸಿದರು.

ಈ ವೇಳೆ ಮಾತನಾಡಿದ ಸಂತೋಷ ಕುಮಾರ ರೈ ಅವರು, ಪೂಜ್ಯ ವೀರೇಂದ್ರ ಹೆಗ್ಗಡೆ ಅವರ ಆಶಯದಂತೆ ಗ್ರಾಮೀಣ ಜನರ ಬದುಕನ್ನು ಹಸನಗೊಳಿಸುವ ನಿಟ್ಟಿನಲ್ಲಿ ನಮ್ಮಗ್ರಾಮಾಭಿವೃದ್ಧಿ ಯೋಜನೆ ಎಲ್ಲಾ ಹಂತಗಳಲ್ಲೂ ಕೆಲಸ ಮಾಡುತ್ತಿದೆ. ದೇವಸ್ಥಾನಗಳ ಜೀರ್ಣೋ ದ್ಧಾರಕ್ಕೆ ನೆರವು ನೀಡುವ ಮೂಲಕ ಜನರಲ್ಲಿ ಧಾರ್ಮಿಕ ಹಾಗೂ ಅಧ್ಯಾತ್ಮಿಕ ಅರಿವು ಮೂಡಿಸುವ ಕೆಲಸ ಮಾಡಲಾ ಗುತ್ತಿದೆ. ದೇವಸ್ಥಾನಗಳನ್ನು ಸ್ವಚ್ಛವಾಗಿ ಹಾಗೂ ಸುಂದರವಾಗಿ ಇಟ್ಟುಕೊಳ್ಳಿ ಎಂದು ಗ್ರಾಮಸ್ಥರಿಗೆ ತಿಳಿಸಿದರು.

ದೇವಸ್ಥಾನ ಸಮಿತಿ ಅಧ್ಯಕ್ಷ ಶ್ರೀ ಶರಣಪ್ಪ ನಿಮ್ಮಂಗ್ರಿ ಮಾತನಾಡಿ, ಧರ್ಮಸ್ಥಳ



ಯೋಜನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ವಿಜಯಪುರ 02 ತಾಲ್ಲೂಕಿನ ಕ್ಷೇತ್ರ ಯೋಜನಾಧಿಕಾರಿಗಳಾದ ಸತೀಶ್ ಸರ್ ಹಾಗೂ ಕೋಟ್ಯಾಳ ಕೆರೆ ಸಮಿತಿ ಅಧ್ಯಕ್ಷರಾದ ಭೀಮನಗೌಡ ಪಾಟೀಲ್, ಕೆರೆ ಸಮಿತಿ ಉಪಾಧ್ಯಕ್ಷರು ಕಾಶೀನಾಥ್ ಕಾಖಂಡಕಿ, ಹರನಾಳ ಗ್ರಾಮ ಪಂಚಾಯತ್ ಅಧ್ಯಕ್ಷರು ಶೋಭಾ ಲಕ್ಷ್ಮಣ್ ಕೈರಾವ್, ಗ್ರಾಮ ಪಂಚಾಯತ್ ಸದಸ್ಯರಾದ ಮಲ್ಲು ಸಿಂಗೆ., ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರ ಸಂಜು ಕೈರಾವ್, ಊರಿನ ಗಣ್ಯರಾದ ಅಶೋಕ್ ಗೋಡ್ಸೆ. ಬೀರಪ್ಪ ಕಟ್ಟೆ. ಸಿದ್ದರಾಮ್ ಕಳೇಲ್. ಸಂಜೀವ್ ಗೇಂಡ್. ಹನುಮಂತ್ ಶೆಟ್ಟನವರ. ಹನುಮಂತ್ ಕೈರಾವ್. ಮಾದೇವ ಕಟ್ಟೆ. ಮಾದೇವ ನರಳೆ. ಲಕ್ಕಪ್ಪ ರಾನಗಟ್ಟಿ. ದರಿಯಪ್ಪ ಜಮ್ಮನಕಟ್ಟಿ , ವೆಂಕಟೇಶ್ ಗಡ್ಡಿ ಕೃಷಿ ಮೇಲ್ವಿಚಾರಕರು,ಸೇರಿದಂತೆ ಎಲ್ಲಾ ಹರನಾಳ ಗ್ರಾಮಸ್ಥರ ಉಪಸ್ಥಿತಿಯಲ್ಲಿ ಡಿಡಿ ವಿತರಣೆ ಮಾಡಲಾಯಿತು.

# ಹಾಲುಮತ ಸಮಾಜ ನೀಡಿದ ಕೊಡುಗೆ ಅಪಾರ: ಪುಂಡಲೀಕ ಕಲ್ಮನಿ

**ಇಂಡಿ :** ಸತ್ಸಂಘದಿಂದ ಜೀವನ ಪಾವನವಾಗುತ್ತದೆ ಎಂದು ಬ.ಬಾಗೇವಾಡಿ ತಾಲೂಕಿನ ಇಂಗಳೇಶ್ವರದ ಪ್ರವಚನಕಾರ ಜಕ್ಕಣ್ಣ ಶಾಸ್ತ್ರೀಗಳು ಹೇಳಿದರು.

ತಾಲೂಕಿನ ಹಿರೇಬೇವನೂರ ಗ್ರಾಮದ ಶಿವಸಿದ್ದ ಭೀರಲಿಂಗೇಶ್ವರ ದೊಡ್ಡಬ್ಬದ ನಿಮಿತ್ಯ ಭೀರಲಿಂಗೇಶ್ವರ ಮಹಾಪುರಾಣ ಪ್ರಾರಂಭೋತ್ಸವದಲ್ಲಿ ಮಾತನಾಡಿ ಸತ್ಸಂಗಗಳಲ್ಲಿ ಪಾಲ್ಗೊಳ್ಳುವುದರಿಂದ ಮನಸ್ಸು ಶಾಂತವಾಗುತ್ತದೆ, ಭಕ್ತಿ ಮಾರ್ಗಗಳನ್ನು ಕಲಿಸಿಕೊಡುತ್ತದೆ ಎಂದರು.

ನಿವೃತ್ತ ಪ್ರಾಚಾರ್ಯ ಎ.ಪಿ. ಕಾಗವಾಡ, ಸಾಹಿತಿ, ಶಿಕ್ಷಕ ದಶರಥ ಕೋರಿ, ಶಿಕ್ಷಕ ಪುಂಡಲಿಕ ಕಲ್ಮನಿ ಮಾತನಾಡಿ, ಹಾಲುಮತ ಸಂಪ್ರದಾಯ ಬಹಳ ವಿಶ್ವವಾದುದು. ಯಾರ ಜತೆಗೂ ಜಗಳ, ವಿರೋಧ ಕಟ್ಟಿಕೊಳ್ಳುವ ಜನ ಹಾಲುಮತದವರಲ್ಲ. ಗುಡ್ಡಗಾಡಿನಲ್ಲಿದ್ದ



ಜನ ನಾಡಿಗೆ ಬಂದು ಎಲ್ಲರೊಂದಿಗೆ ಹೊಂದಿಕೊಂಡು ಬದುಕು ಕಟ್ಟಿಕೊಂಡಿ–ದ್ದಾರೆ. ಈ ಸಮುದಾಯವು ಸಮಾಜಕ್ಕೆ ಹಾಲು, ಕಂಬಳಿ ಕೊಡುಗೆ ನೀಡಿದೆ. ಈ ಸಮುದಾಯದ ಮುಖ್ಯ ಆಕರ ಸಾಹಿತ್ಯ ಡೊಳ್ಳಿನ ಹಾಡುಗಳು. ಅದರ ಮೂಲಕವೇ ಅವರ ಸಂಸ್ಕೃತಿಯ ಪರಿಚಯವಾಗಿದೆ ಎಂದು ಹೇಳಿದರು.

ಸಾನಿಧ್ಯ ವೇದಮೂರ್ತಿ ದಯಾನಂದ ಹಿರೇಮಠ ವಹಿಸಿ ಆಶೀರ್ವಚನ ನೀಡಿ–ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿ.ಎಸ್. ಪಾಟೀಲ ವಹಿಸಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಶೈಲಜಾ ಜಾಧವ,ಶಂಕರಗೌಡಪಾಟೀಲ,ಸಿದ್ದರಾಯ ಹಂಜಗಿ, ಹಣಮಂತಮಹಾರಾಯ ಕಲ್ಮನಿ, ಮುತ್ತಪ್ಪ ಚಿಕ್ಕಬೇವನೂರ, ಹೂವಣ್ಣ ಪೂಜಾರಿ, ಘಂಟೆಪ್ಪ ಕುಂಬಾರ, ಸಂಗಪ್ಪ ಉಪ್ಪಿನ, ಬಸವರಾಜ ಅರ್ಜುಣಗಿ, ಆನಂದ ಪಾಟೀಲ, ಬಸವರಾಜ ತೇಲಿ, ಬಸವರಾಜ ಸೋಲಾಪೂರ, ಗುರಪ್ಪಡಂಗಿ, ಶಂಕಪ್ಪ ವಗ್ಗೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಅಂತಾರಾಷ್ಟ್ರೀಯ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದ ಪೃಥ್ವಿ

* ಚಂದ್ರಶೇಖರ ಮೋರೆ

**ಮಹಾಲಿಂಗಪುರ :** ಸಾಧಿಸಬೇಕೆಂಬ ಛಲ ಮತ್ತು ಸತತ ಪರಿಶ್ರಮವಿದ್ದರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ನೆರೆಯ ಕೆಸರಗೊಪ್ಪದ ಗ್ರಾಮೀಣ ಪ್ರತಿಭೆ ಪೃಥ್ವಿ ಧರೆಪ್ಪ ಬ್ಯಾಕೂಡ ರಾಷ್ಟ್ರಮಟ್ಟದ ಪಂದ್ಯಾವಳಿಯಲ್ಲಿ ಬಂಗಾರ ಪದಕವನ್ನು ಗೆದ್ದು ಗ್ರಾಮದ ಕೀರ್ತಿಯನ್ನು ರಾಷ್ಟ್ರಮಟ್ಟದಲ್ಲಿ ಬೆಳಗಿಸಿದ್ದಾಳೆ.

ಕೆಸರಗೊಪ್ಪ ಗ್ರಾಮದ 14 ವರ್ಷದ ಬಾಲಕಿ, 8ನೇ ತರಗತಿ ವಿದ್ಯಾರ್ಥಿನಿ ಪೃಥ್ವಿ ಧರೆಪ್ಪ ಬ್ಯಾಕೋಡ ತನ್ನ ನಿರಂತರ ಶ್ರಮ, ಸತತ ಅಧ್ಯಯನ, ಸಾಧಿಸಬೇಕೆಂಬ ಛಲದಿಂದಾಗಿ ತಾನು ಓದುತ್ತಿರುವ ತರಗತಿಯಲ್ಲಿ ಎಂದಿಗೂ ನಂಬರ್ ಒನ್ ಸ್ಥಾನವನ್ನು ಮತ್ತೊಬ್ಬರಿಗೆ ಬಿಟ್ಟುಕೊಟ್ಟಿಲ್ಲ. ಪಾಠದ ಜೊತೆಗೂ ಆಟದಲ್ಲಿಯೂ ಆಸಕ್ತಿ ಇರುವ ಪೃಥ್ವಿ ಇಂದು ರಾಷ್ಟ್ರಮಟ್ಟದ ಅಥ್ಲೇಟಿಕ್ಸ್‌ಗೆ ಆಯ್ಕೆಯಾಗಿ ಬಂಗಾರ ಪದಕವನ್ನು ಗೆಲ್ಲುವ ಮೂಲಕ ನಮ್ಮ ರಾಜ್ಯದ ಕೀರ್ತಿಯನ್ನು ಹೆಚ್ಚಿಸಿದ್ದಾಳೆ.

ಇದೇ ಅ.16 ರಿಂದ 19ರವರೆಗೆ ಆಂಧ್ರದ ಗುಂಟೂರಿನಲ್ಲಿ ಜರುಗಿದ ರಾಷ್ಟ್ರೀಯ ಜ್ಯೂನಿಯರ್ ಚಾಂಪಿಯನ್‌ಶಿಪ್ 35ನೇ ಸೌಥ್ ಜೋನ್ ಕ್ರೀಡಾಕೂಟದ 60 ಮೀ. ಓಟ, 600 ಮೀ.ಓಟ, ಎತ್ತರ ಜಿಗಿತ ಈ ಮೂರು ವಿಭಾಗದ ಟ್ರಯಥ್ಲಾನ್ 'ಸಿ' ಯ 14 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದಳು. ಒಟ್ಟು 2362 ಅಂಕಗಳನ್ನು ಪಡೆದುಕೊಂಡು ಚಿನ್ನದ ಪದಕ ಪಡೆದುಕೊಂಡಿದ್ದಾಳೆ. 2354 ಅಂಕ ಪಡೆದ ತೆಲಂಗಾಣದ ಜೋಸ್ನಾ ಬೆಳ್ಳಿ ಪದಕ, 2192 ಅಂಕ ಪಡೆದ ಕೇರಳದ ಸೈನಾ ಕಂಚಿನ ಪದಕ ಪಡೆದಿದ್ದಾರೆ.





**ನಮ್ಮ ಮಗಳ ಕ್ರೀಡಾ ಸಾಧನೆಗೆ ಅಂತಾರಾಷ್ಟ್ರೀಯ ಆಟಗಾರ ಬಿ.ಜಿ.ನಾಗರಾಜ, ತಾಲೂಕು ಅಥ್ಲೆಟಿಕ್ಸ್ ಅಸೋಷಿಯೇಷನ್ ಕಾರ್ಯದರ್ಶಿ ಶಿವಾನಂದ ಮಾಳಿ, ಜಿಲ್ಲಾ ಅಸೋಷಿಯೇಷನ್ ಕಾರ್ಯದರ್ಶಿ ಯಲಗನ್ನವರ, ಮಹಾಂತೇಶ ಬಳ್ಳಾರಿ, ಯಲ್ಲಪ್ಪ ಭರಮನ್ನವರ, ಸಂಗಮೇಶ ಮುಕಾರ್ತಿಹಾಳ, ಶಿವಯ್ಯ ಮಠಪತಿ, ಯಲ್ಲಪ್ಪ ಜಗದಾಳ, ಮಹಾಲಿಂಗ ಮಾದರ, ಸದಾಶಿವ ಕುರಿ ಅವರುಗಳ ಮಾರ್ಗದರ್ಶನ ಮತ್ತು ಪ್ರೋತ್ಸಾಹದ ಜೊತೆಗೆ ಅವಳ ಶ್ರದ್ದೆ, ಪ್ರಯತ್ನ, ಪರಿಶ್ರಮವೇ ಕಾರಣ.**

**–ತಂದೆ ಧರೆಪ್ಪ ಬ್ಯಾಕೋಡ, ಪ್ರೌಢ ಶಾಲೆಯ ಶಿಕ್ಷಕ.**

**–ತಾಯಿ ಸವಿತಾ ಬ್ಯಾಕೂಡ. ಪ್ರಾಥಮಿಕ ಶಾಲಾ ಶಿಕ್ಷಕಿ.**

ಇದೇ ಅ.24ರಿಂದ 29ರವರೆಗೆ ಓಡಿಸ್ಸಾದ ಭುವನೇಶ್ವರದಲ್ಲಿ ನಡೆಯಲಿರುವ 39ನೇ ರಾಷ್ಟ್ರೀಯ ಜೂನಿಯರ್ ಚಾಂಪಿಯನ್‌ಶಿಪ್ ಕ್ರೀಡಾಕೂಟಕ್ಕೆ ಪೃಥ್ವಿ ಬ್ಯಾಕೂಡ ಆಯ್ಕೆಯಾಗಿದ್ದಾಳೆ.

ಅ.6ರಿಂದ 10ರವರೆಗೆ ಉತ್ತರ ಪ್ರದೇಶದ ವಾರಣಾಸಿಯಲ್ಲಿ ನಡೆದ ಸಿಬಿಎಸ್‌ಇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 200ಮೀ. ಮತ್ತು 800ಮೀ ಓಟದಲ್ಲಿ ಭಾಗವಹಿಸಿ 800ಮೀ.ಓಟದಲ್ಲಿ 5ನೇ ಸ್ಥಾನ ಗಳಿಸಿದ್ದಳು.

ಚಿಕ್ಕಂದಿನಿಂದಲೇ ಓದು ಮತ್ತು ಕ್ರೀಡೆಗಳಲ್ಲಿ ಆಸಕ್ತಿ ಬೆಳೆಸಿಕೊಂಡ ಪೃಥ್ವಿ ನಿತ್ಯ ಮುಂಜಾನೆ 4.30ರಿಂದ 5.30ರವರೆಗೆ ಓದು, ನಂತರ ಕನಿಷ್ಟ 5–6 ಕೀಮಿ ಸೈಕ್ಲಿಂಗ್ ಅಥವಾ ರನ್ನಿಂಗ್. ಜೊತೆಗೆ ನಿಯಮಿತ ಜಿಮ್, ಸೈಕ್ಲಿಂಗ್,

ಸ್ವಿಮ್ಮಿಂಗ್ ಮುಂತಾದ ಕ್ರೀಡೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುವದರೊಂದಿಗೆ ಆಟ ಮತ್ತು ಪಾಠ ಎರಡರಲ್ಲಿಯೂ ಸೈ ಎನಿಸಿಕೊಂಡು ಇತರರಿಗೆ ಮಾದರಿಯಾಗಿದ್ದಾಳೆ.

# 23 ವರ್ಷಗಳ ನಂತರ ಗುರು–ಶಿಷ್ಯರ ಸಂಗಮ, ಸಹಪಾಠಿಗಳ ಸಂಭ್ರಮ

## ಕಲಿತ ಮೇಲೆ ಶಾಲೆಯನ್ನು, ಬಲಿತ ಮೇಲೆ ಗುರುಗಳನ್ನು ಮರೆಯಬಾರದು!

## ಪಾದಪೂಜೆ ಮಾಡಿ, ಪುಷ್ಪವೃಷ್ಟಿ ಮಾಡಿ ಗುರುಭಕ್ತಿ ಮೆರೆದ ಶಿಷ್ಯರು!






**ಮಹಾಲಿಂಗಪುರ :** ಕಲಿತ ಮೇಲೆ ಶಾಲೆಯನ್ನು, ಬಲಿತ ಮೇಲೆ ಗುರುಗಳನ್ನು ಮರೆಯಬಾರದು, ಜ್ಞಾನ ನೀಡಿ ಬದುಕಿಗೆ ದಾರಿ ತೋರಿದ ಶಿಕ್ಷಕರನ್ನು ಗೌರವಿಸಿ ಅಕ್ಷರ ಋಣ ತೀರಿಸಬೇಕು ಎಂಬ ಉದ್ದೇಶಕ್ಕಾಗಿ ಹಳೆ ವಿದ್ಯಾರ್ಥಿಗಳು 23 ವರ್ಷಗಳ ನಂತರ ಒಟ್ಟಾಗಿ ಸೇರಿ ನೆನಪಿನ ಬುತ್ತಿ ಬಿಚ್ಚಿ ಅನುಭವಗಳನ್ನು ಮೆಲುಕು ಹಾಕಿದ್ದು ವಿಶೇಷವಾಗಿತ್ತು.

ಪಟ್ಟಣದ ಎಸ್‌ಸಿಪಿ ಪ್ರೌಢಶಾಲೆಯಲ್ಲಿ 2000–2001ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾದ ವಿದ್ಯಾರ್ಥಿಗಳು ಇಲ್ಲಿನ ಬನಶಂಕರಿ ಸಾಂಸ್ಕೃತಿಕ ಭವನದಲ್ಲಿ ಶನಿವಾರ ದಿ.19ರಂದು ಗುರು ವಂದನೆ ಹಾಗೂ ಸಹಪಾಠಿಗಳ ಸಮ್ಮಿಲನ ಕಾರ್ಯಕ್ರಮ ಹಮ್ಮಿಕೊಂಡರು.

ಬೆಳಗ್ಗೆ ಎಲ್ಲ ಗುರುವರ್ಯರನ್ನು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಿಂದ ಬನಶಂಕರಿ ದೇವಸ್ಥಾನದವರೆಗೆ ಮೆರವಣಿಗೆ ಮೂಲಕ ಕರೆದೊಯ್ದರು. ಮಹಾದ್ವಾರದಿಂದ ವೇದಿಕೆವರೆಗೆ ದಾರಿಗೆ ಹೂಚೆಲ್ಲಿ, ಗುರುಗಳ ಮೇಲೆ ಶಿಷ್ಯರು ಪುಷ್ಪವೃಷ್ಟಿ ಮಾಡಿ ಬರಮಾಡಿಕೊಂಡರು.

ಕಾರ್ಯಕ್ರಮ ಆರಂಭಕ್ಕೂ ಮುನ್ನ ತಮ್ಮನ್ನು ಅಗಲಿದ ನಾಲ್ವರು ಶಿಕ್ಷಕರಿಗೆ ಆರು ಸಹಪಾಠಿಗಳಿಗೆ ಮೌನಾಚರಣೆ ಮಾಡುವ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಚೇತನಾ ಬಿಸ್ವಾಗರ ಮತ್ತು ಗೌರಿ ಪಾಟೀಲ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಚಾಲನೆಗೊಂಡಿತು. ಹಳೆ ವಿದ್ಯಾರ್ಥಿನಿ ಹಾಗೂ ಶಿಕ್ಷಕಿ ವೇದಿಕೆ ಮೇಲಿನ ಎಲ್ಲ ಗುರುವರ್ಯರನ್ನು ಸ್ವಾಗತಿಸಿದರು. ಎಲ್ಲ ಗುರು ವೃಂದ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ವಿದ್ಯಾರ್ಥಿಗಳು ಗುರುಗಳ ಕುರಿತು ಮಾತನಾಡಿ, ಗುರಿಯಿಲ್ಲದ ಜೀವನ, ಗರಿಯಿಲ್ಲದ ಹಕ್ಕಿಯಂತೆ ಗುರುವಿಲ್ಲದ ಬದುಕು ಗುರುತಿಲ್ಲದ ಅಸ್ತಿತ್ವದಂತೆ ಕಪ್ಪು ಹಲಗೆ ಮೇಲೆ ಸವೆದು ಹೋಗುವ ಬಳಪದಂತೆ ನಮ್ಮನ್ನು ತಿದ್ದುವುದರಲ್ಲೇ ಬದುಕನ್ನು ಸವೆಸಿದ ಗುರುಗಳ ತ್ಯಾಗ ದೊಡ್ಡದು, ನಮ್ಮ ಹಣೆ ಮತ್ತು ಅವರ ಪಾದ ಸವೆಯುವವರೆಗೆ ನಮಿಸಿದರೂ ಅವರ ಋಣ ತೀರದು ಎಂದರು.

ಶಿಕ್ಷಕರಾದ ಜಿ.ಜಿ.ಹುಬ್ಬಳ್ಳಿ, ಎಸ್.ಬಿ.ಹುಲಕುಂದ, ಎಸ್.ಬಿ.ಕೋರಿಶೆಟ್ಟಿ, ಡಿ.ಎ.ಬಿಸನಾಳ, ಬಿ.ಡಿ.ಗೋಕಾಕ, ಬಿ.ಎನ್. ಅರಕೇರಿ, ಎಂ.ಐ.ಡಾಂಗೆ, ಕೆ.ಎಸ್.ಭಜಂತ್ರಿ, ಪ್ರಭು ಹಿರೇಮಠ, ಆರ್.ಎಸ್.ಯರಗಾಣಿ, ಸುನಿತಾ ಚೌಗಲಾ, ಜೆ.ಆರ್.ಮಠ, ರಾಮು ಮಾದರ ಅವರ ಪಾದಪೂಜೆ ಮಾಡಿ ಸನ್ಮಾನಿಸುವ ಮೂಲಕ ವಿದ್ಯಾಥಿಗಳು ತಮ್ಮ ಗುರುಭಕ್ತಿ ಮೆರೆದರು.

ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಒಬ್ಬೊಬ್ಬರಾಗಿ ತಮ್ಮ ಅನಿಸಿಕೆ, ಅಭಿಪ್ರಾಯ, ನೆನಪು, ಅನುಭವಗಳನ್ನು ಹಂಚಿಕೊಳ್ಳುತ್ತ ಕಳೆದು ಹೋದ ಕಲಿಕೆಯ ಕ್ಷಣಗಳನ್ನು ಮೆಲುಕು ಹಾಕಿದರು. ನಂತರ ಸಾಮೂಹಿಕವಾಗಿ ಭೋಜನ ಸವಿದು ಸಾಮೂಹಿಕ ಭಾವಚಿತ್ರ ತೆಗೆಸಿಕೊಂಡು ಒಂದೇ ಫ್ರೇಮ್‌ನಲ್ಲಿ ಬಂಧಿಯಾದರು. ಸಂಜೆ ತಾವು ಕಲಿತ ಪ್ರೌಢಶಾಲೆಗೆ ತೆರಳಿ ಆವರಣದಲ್ಲಿ ಸೆಲ್ಫಿ ಕ್ಲಿಕ್ಕಿಸಿಕೊಂಡರು. ತರಗತಿಯಲ್ಲಿ ವಿದ್ಯಾರ್ಥಿಗಳಂತೆ ಕುಳಿತು ಮತ್ತೆ ಶಿಕ್ಷಕರಿಂದ ಒಂದು ಅವಧಿಯ ಪಾಠ ಹೇಳಿಸಿಕೊಂಡು ಸಂಭ್ರಮಿಸಿದರು.

ಮಹಾಲಿಂಗ ಮಾಳಿ, ಶಂಕರ ಸೊನ್ನದ, ಶಬ್ಬೀರ ಪಟೇಲ, ಮಹಾಂತೇಶ ಕುರಹಟ್ಟಿ, ಮಾರುತಿ ಸುಣಧೋಳಿ, ಶ್ರೀಧರ ಫತೇಪುರ, ರಾಜು ಮೇಲಿನಕೇರಿ, ಸುರೇಶ ಮಡಿವಾಳ, ಸದಾಶಿವ ಸಾಲಿಮಠ, ಆರತಿ ಶೆಟ್ಟರ, ಚೇತನಾ ಬಿಸ್ವಾಗರ, ಗೌರಿ ಪಾಟೀಲ, ಸವಿತಾ ಹೂಗಾರ ಸೇರಿದಂತೆ ನೂರಕ್ಕೂ ಹೆಚ್ಚು ಸಹಪಾಠಿಗಳು ಭಾಗವಹಿಸಿದ್ದರು. ಶಿವಲಿಂಗ ಸಿದ್ನಾಳ ನಿರೂಪಿಸಿ ವಂದಿಸಿದರು.

# ಮಹಿಳೆಯರ ಸ್ವಾವಲಂಬಿ ಬದುಕಿಗೆ ಸ್ವಉದ್ಯೋಗ ಸಹಕಾರಿ: ಸಹಜಾನಂದ ಸ್ವಾಮಿಜಿ

**ಮಹಾಲಿಂಗಪುರ :** ಮಹಿಳೆಯರು ಆರ್ಥಿಕ ಸ್ವಾವಲಂಬನೆ ಸಾಧಿಸಲು ಗುಡಿ ಕೈಗಾರಿಕೆ, ಕರಕುಶಲತೆಯ ಸ್ವಉದ್ಯೋಗಗಳನ್ನು ಕೈಗೊಳ್ಳಬೇಕು ಎಂದು ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಸಹಜಾನಂದ ಸ್ವಾಮೀಜಿ ಹೇಳಿದರು.

ಪಟ್ಟಣದ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘ, ಹೊಳೆಮಠದ ಐರಣಿ ಮಹಾಸಂಸ್ಥಾನ ಹಾಗೂ ದಾವಣಗೆರೆಯ ಸ್ಫೂರ್ತಿ ನಗರ ಗ್ರಾಮೀಣಾಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯಿಂದ ಹಮ್ಮಿಕೊಂಡ ಮಹಿಳಾ ಉಚಿತ ಸ್ವಯಂ ಉದ್ಯೋಗ ತರಬೇತಿ ಶಿಬಿರ ಸಮಾರೋಪ ಕಾರ್ಯಕ್ರಮ ಸಾನಿಧ್ಯವಹಿಸಿ ಮಾತನಾಡಿದರು.

ಮೂರು ತಿಂಗಳ ಕಾಲ ಪತರಬೇತಿ ಪಡೆದವರು ಇಷ್ಟಕ್ಕೆ ಸುಮ್ಮನಾಗದೆ, ಅದನ್ನು ಜೀವನಕ್ಕೆ ಒಂದು ಆಧಾರವಾಗಿ ಮಾಡಿಕೊಳ್ಳಬೇಕು.



ಶಿಬಿರದಲ್ಲಿ ಹೇಳಿ ಕೊಟ್ಟಿದ್ದನ್ನು ಶ್ರದ್ಧೆಯಿಂದ ಕಲಿತು, ಸ್ವಉದ್ಯೋಗ ಕೈಗೊಳ್ಳಬೇಕು ಎಂದರು.

ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ ಕಾರ್ಯಕ್ರಮ ಉದ್ಘಾಟಿಸಿದರು. ಶಿಬಿರಾರ್ಥಿಗಳಾದ ನಜರಾನಾ ಯಕ್ಕಂಬಿ, ಲಕ್ಷ್ಮೀ ಮೂಗಳಖೋಡ, ಸವಿತಾ ಮನ್ನಯ್ಯನವಮಠ, ವರ್ಷಾ, ಶ್ರೀದೇವಿ ಗೊರನಕೊಳ್ಳ, ವೈಷ್ಣವಿ ಶಿಬಿರದ ಪ್ರಯೋಜನ ಕುರಿತು ಅನಿಸಿಕೆ ವ್ಯಕ್ತಪಡಿಸಿದರು.

ಸಂಸ್ಥೆ ಅಧ್ಯಕ್ಷ ಗೂಳಪ್ಪ ಗೊಳಸಂಗಿ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆ ಕಾರ್ಯದರ್ಶಿ ಎಂ.ಗುಡ್ಡಪ್ಪ, ಕೆನರಾ ಬ್ಯಾಂಕ್ ವ್ಯವಸ್ಥಾಪಕಿ ಉಮಾದೇವಿ, ಪುರಸಭೆ ಸದಸ್ಯ ಬಸವರಾಜ ಯರಗಟ್ಟಿ, ಚನಬಸು ಹುರಕಡ್ಲಿ, ಕಾನಿಪ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ, ಪತ್ರಕರ್ತರಾದ ಚಂದ್ರಶೇಖರ ಮೋರೆ, ಶಿವಾನಂದ ಕೊಣ್ಣೂರ ಮಾತನಾಡಿದರು.

ಪುರಸಭೆ ಸದಸ್ಯೆ ಸವಿತಾ ಹುರಕಡ್ಲಿ, ಸಮುದಾಯ ಸಂಘಟನಾಧಿಕಾರಿ ಸಿ.ಎಸ್. ಮಠಪತಿ, ಪ್ರೀತಿ ಹುಲಕುಂದ, ಸಿದ್ದು ಢಡೂತಿ, ಬಸವರಾಜ ಗಿರಿಸಾಗರ, ಅನಂತಕುಮಾರ ಮನವಡೆ ಸೇರಿದಂತೆ ನೂರಾರು ಶಿಬಿರಾರ್ಥಿಗಳು ಇದ್ದರು.

# ಜಾತಿ, ಮತ, ಪಂಥಗಳ ಭೇದಭಾವ ಮರೆತು ಹಿಂದುಗಳು ಒಗ್ಗಟ್ಟಾಗಿ: ಸದಾಶಿವ ಗುರೂಜಿ

**ಮಹಾಲಿಂಗಪುರ :** ಜಾತಿ, ಮತ, ಪಂಥಗಳ ಭೇದಭಾವ ಮರೆತು ಹಿಂದುಗಳು ಒಗ್ಗಟ್ಟಾಗಿ, ಭಾಗ್ಯಗಳಿಗೆ ಮರುಳಾಗದೆ ಸ್ವಾಲಂಬಿಗಳಾಗಿ ಬದುಕು ಸಾಗಿಸಬೇಕು ಎಂದು ಋಷಿಯೋಗಾಶ್ರಮದ ಸದಾಶಿವ ಗುರೂಜಿ ಹೇಳಿದರು.

ಸಮೀಪದ ರನ್ನಬೆಳಗಲಿ ಪಟ್ಟಣದ ಬಂದಲಕ್ಷ್ಮೀ ದೇವಸ್ಥಾನದ ಆವರಣದ ಕವಿಚಕ್ರವರ್ತಿ ರನ್ನಸಾಂಸ್ಕೃತಿಕ ಸಭಾಭವದಲ್ಲಿ ಜರುಗಿದ ಶ್ರೀರಾಮ ಸೇನಾ ಮತ್ತು ಶ್ರೀದುರ್ಗಾಸೇನಾ ರನ್ನ ಬೆಳಗಲಿ ವಲಯ ಘಟಕಗಳ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದ ಅವರು ಹಿಂದೂಗಳ ಪ್ರತಿಮನೆಯಲ್ಲಿಶ್ರೀರಾಮಸೇನೆಕಾರ್ಯಕರ್ತ ಇರುವಂತೆ ಆಗಬೇಕು. ಅಂದಾಗ ಮಾತ್ರ ಹಿಂದೂ ಸಂಸ್ಕೃತಿಯನ್ನು ಉಳಿಸಲು ಸಾಧ್ಯ. ಸಂಘದ ಪದಾಧಿಕಾರಿಗಳು ಸಮುದಾಯದ ಮಾದರಿ ವ್ಯಕ್ತಿಗಳಾಗಿ, ದುರ್ಗುಣಗಳಿಂದ ದೂರವಿದ್ದುಭಾರತೀಯ ಸಂಸ್ಕೃತಿಯ ಪ್ರತಿನಿಧಿಯಾಗಿ ಬದುಕಬೇಕು ಎಂದರು.

ಶ್ರೀರಾಮ ಸೇನೆಯ ರಾಜ್ಯ ಉಪಾಧ್ಯಕ್ಷ ಮಹಾಲಿಂಗಪ್ಪ ಗುಂಜಿಗಾಂವಿ ಹಿಂದೂಗಳ ಪ್ರತಿಮನೆಯಮಾತೆಯರಿಗೆಸುರಕ್ಷತೆಯನ್ನು ಒದಗಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ಪ್ರಸ್ತುತ ದಿನಗಳಲ್ಲಿ ಹೆಚ್ಚಾಗಿರುವ ಲವ್ ಜಿಹಾದ್, ಭಯೋತ್ಪಾದನೆ, ಮತಾಂತರ, ವಿದೇಶಿ ಸಂಸ್ಕೃತಿಯ ವ್ಯಾಮೋಹದಂತಹ ಎಲ್ಲಾ ಅಂಶಗಳು ನಮ್ಮ ಸಂಸ್ಕೃತಿಗೆ ಮಾರಕವಾಗುತ್ತಿವೆ. ಕಾರಣ ನಾವು ಒಗ್ಗಟ್ಟಾಗಿ ಹೋರಾಡುತ್ತಿಲ್ಲ. ಹಿಂದೂಗಳಿಗಿರುವ ಒಂದೇ ರಾಷ್ಟ ಅದುವೇ ಭಾರತ. ಭಾರತ ಹಿಂದೂ ರಾಷ್ಟವಾಗಿ ಉಳಿಯಲು ಪ್ರತಿಯೊಬ್ಬರೂ ರಾಷ್ಟಕ್ಕಾಗಿ



ದುಡಿಯುವ ಮನಸ್ಥಿತಿ ತಾಳಬೇಕು ಎಂದರು. ಸಿದ್ದರಾಮ ಶಿವಯೋಗಿಗಳು ಪ್ರಾಸ್ತಾವಿಕವಾಗಿ ಮಾತನಾಡಿ ಇಂದಿನ ಯುವ ಸಮೂಹ ರಾಷ್ಟ ನಾಯಕರ ಪ್ರೇರಣೆ ಪಡೆದು, ರಾಷ್ಟ್ರ ಧರ್ಮಕ್ಕಾಗಿ ಗಟ್ಟಿಯಾಗಿ ನಿಲ್ಲಲು ಸಂಘಟನೆಗೆ ಬನ್ನಿ. ನಿಸ್ವಾರ್ಥದಿಂದ ಸಂಘಟನೆಯಲ್ಲಿ ಕೈಜೋಡಿಸಿ ಎಂದರು. ಕಾರ್ಯಕ್ರಮದ ಸಾನಿಧ್ಯವನ್ನು ಚಕ್ರ ಪೂರವಾಸಿನಿ ಚಕ್ರೇಶ್ವರಿ ಜ್ಯೋತಿರ್ವಿಜ್ಞಾನ ಕೇಂದ್ರದ ಸಂಸ್ಥಾಪಕ ಅಧ್ಯಕ್ಷ ಚಿದಾನಂದ ಮಹಾರಾಜರು ಸಾನಿಧ್ಯವಹಿಸಿದ್ದರು. ಜಿಲ್ಲಾ ಅಧ್ಯಕ್ಷ ಅರ್ಜುನ ನಾಗರಾಳ, ತಾಲೂಕಾ ಅಧ್ಯಕ್ಷ ಈಶ್ವರ ಕ್ವಾನ್ಯಾಗೋಳ, ದುರ್ಗಾ ಸೇನೆಯ ನೂತನ ಅಧ್ಯಕ್ಷರಾದ ವೀಣಾ ಬಡಿಗೇರ, ಕಾರ್ಯಾಧ್ಯಕ್ಷ ನೀಲವ್ವ ದಂಡಿನ, ಉಪಾಧ್ಯಕ್ಷೆ ಲಕ್ಷ್ಮೀ ಕುಂಬಾರ, ಪ್ರಧಾನ ಕಾರ್ಯದರ್ಶಿ ರೇಖಾ ಕಂಠಿ, ಕಾರ್ಯದರ್ಶಿ ಹನಮವ್ವ ಕಬ್ಬೂರ, ಕೋಶಾಧ್ಯಕ್ಷ ಕೃಷ್ಣವ್ವ ಚಂದಪ್ಪನವರ ಅತಿಥಿಗಲಾಗಿ ಭಾಗವಹಿಸಿದ್ದರು.

ರನ್ನ ಬೆಳಗಲಿಯ ಶ್ರೀರಾಮ ಸೇನಾ ವಲಯ ಘಟಕದ ನೂತನ ಗೌರವಾಧ್ಯಕ್ಷ ತಿಮ್ಮನಗೌಡ ಪಾಟೀಲ, ಅಧ್ಯಕ್ಷ ಮಹಾಂತೇಶ ಜಿರಗಾಳ, ಕಾರ್ಯಾಧ್ಯಕ್ಷ ಮಹಾಲಿಂಗಪ್ಪ ಹೊಸಪೇಟೆ, ಉಪಾಧ್ಯಕ್ಷ ಕೃಷ್ಣಾ ಕಡಪಟ್ಟಿ, ಬಸವರಾಜ ಕುಂಬಾಳಿ, ಪ್ರಧಾನ ಕಾರ್ಯದರ್ಶಿ ಗಂಗಾಧರ ಗುರವ, ಕಾರ್ಯದರ್ಶಿ ಮಂಜು ಕೊರಡ್ಡಿ, ಸಹ ಕಾರ್ಯದರ್ಶಿ ಸಂತೋಷ ಬಡಿಗೇರ, ಖಜಾಂಚಿ ಮಲ್ಲು ಕುಲಗೋಡ, ಸಹಖಜಾಂಚಿ ಪುಂಡಲಿ ರಾಮದುರ್ಗ, ಸಂಚಾಲಕ ಮಹದೇವ ಹೊಸಪೇಟಿ, ಸಹ ಸಂಚಾಲಕ ಮಹೇಶ ಕುಂಬಾರ, ಸಾಮಾಜಿಕ ಜಾಲತಾಣ ಸಂತೋಷ ಹೆಗಾಡಿ, ರವಿ ಕೋತ್ವಾಳ, ವಿದ್ಯಾರ್ಥಿ ಸೇನಾಧ್ಯಕ್ಷ ಪರಮಾನಂದ ಧರ್ಮಟ್ಟಿ, ಸಂಚಾಲಕ ಮುತ್ತು ಪೂಜಾರಿ, ರೈತಸೇನಾ ಅಧ್ಯಕ್ಷ ವಿಠ್ಠಲ ಜೈನಪುರ, ಕಾರ್ಮಿಕ ಸೇನಾ ಅಧ್ಯಕ್ಷ ವಿಠ್ಠಲ ಹೊರಗಿನಮನಿ ಸೇರಿ ಎಲ್ಲಾ ಪದಾಧಿಕಾರಿಗಳಿಗೆ ಶ್ರೀರಾಮ್ ಸೇನಾ ರಾಜ್ಯ ಪದಾಧಿಕಾರಿಗಳು ಪ್ರಮಾಣ ಪತ್ರಗಳನ್ನು ವಿತರಿಸಿದರು. ಶಿಕ್ಷಕ ಹನುಮಂತ ಚಂದಪ್ಪನವರ ನಿರೂಪಿಸಿ–ವಂದಿಸಿದರು.

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಒಕ್ಕೂಟದ ಪದಾಧಿಕಾರಿಗಳ ಸಮಾವೇಶ

## ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಆರ್ಥಿಕ ಪ್ರಗತಿ: ಸಂತೋಷ ಕುಮಾರ ರೈ



**ವಿಜಯಪುರ :** ಜಿಲ್ಲೆಯ ನಗರದ ಜನತ್ ಹಾಲ್ ನಲ್ಲಿ ವಿಜಯಪುರ 2 ತಾಲೂಕಿನ ತಾಲೂಕು ಮಟ್ಟದ ಪ್ರಗತಿ ಬಂದು ಸ್ವಸಹಾಯ ಸಂಘಗಳ ಒಕ್ಕೂಟದ ಪದಾಧಿಕಾರಿಗಳ ಸಮಾವೇಶ ನಡೆಯಿತು.

ಈ ಕಾರ್ಯಕ್ರಮದಲ್ಲಿ ವಿಜಯಪುರ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಯುತ ಆನಂದ್ ಕುಲಕರ್ಣಿ ಯವರು, ಕರ್ನಾಟಕ ದಲಿತ ಸಂಘರ್ಷ ಸಮಿತಿಯ ನಗರ ಸಂಚಾಲಕರಾದ ರಾಜು ಎಲ್ ತೊರವಿಯವರು, ಬ್ಯಾಂಕ್ ಆಫ್ ಬರೋಡ ವಿಜಯಪುರ ಶಾಖೆಯ ಶಾಖಾ ಪ್ರಬಂಧಕರಾದ ಶ್ರೀ ಮಹಾನ್ ರವರು, ವಿಜಯಪುರ ಜಿಲ್ಲೆಯ ನಿರ್ದೇಶಕರಾಗಿರುವ ಶ್ರೀ ಸಂತೋಷ್ ಕುಮಾರ್ ರೈ ಅವರು ಭಾಗವಹಿಸಿ ಈ ಕಾರ್ಯಕ್ರಮವನ್ನು ಜಂಟಿಯಾಗಿ ಉದ್ಘಾಟಿಸಿದರು.

ಜಿಲ್ಲಾ ನಿರ್ದೇಶಕರಾದ ಸಂತೋಷ್ ಕುಮಾರ್ ರೈ ಅವರು ಮಾತನಾಡಿ ನಾಡಿನ ಜನತೆಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವು ಅಗತ್ಯ ಸಹಕಾರ ನೀಡುತ್ತಿದೆ. ಇದರಿಂದ ಪುರುಷರಷ್ಟೇ ಮಹಿಳೆಯರು ಆರ್ಥಿಕ ಪ್ರಗತಿ ಸಾಧಿಸುತ್ತಿದ್ದಾರೆ ಎಂದರು.

ಸದಸ್ಯರ ಪ್ರಬುದ್ಧತೆ, ದಶಾಂಶಗಳ ಬಗ್ಗೆ ಮಾಹಿತಿ, ಸಂಘಗಳಿಗೆ ನೀಡುವ ಪ್ರಗತಿ ನಿಧಿ ಮರುಪಾವತಿ ಚೀಟಿ, ಮಾಸಿಕ ವರದಿ, ಒಕ್ಕೂಟದ ಪದಾಧಿಕಾರಿಗಳ ಜವಾಬ್ದಾರಿ ನಿರ್ವಹಣೆ ಮುಂತಾದ ವಿಚಾರಗಳ ಬಗ್ಗೆ ಮಾಹಿತಿಯನ್ನು ನೀಡಿದರು.

ಬ್ಯಾಂಕ್ ಆಫ್ ಬರೋಡದ ಪ್ರಬಂಧಕರು ಸಿಸಿ ಖಾತೆಯ ಬಗ್ಗೆ,ಬ್ಯಾಂಕಿನ ಬಡ್ಡಿ ದರ,ಗಳ ಬಗ್ಗೆ ಮಾಹಿತಿ ನೀಡಿದರು.

ಈ ಕಾರ್ಯಕ್ರಮದಲ್ಲಿ ಪ್ರಾದೇಶಿಕ ವ್ಯಾಪ್ತಿಯ ಬಿಸಿ ಯೋಜನಾಧಿಕಾರಿ ಮಾಂತೇಶ್ ರವರು, ತಾಲೂಕು ಯೋಜನಾಧಿಕಾರಿ ಸತೀಶ್, ತಾಲೂಕಿನ ಎಲ್ಲಾ ಮೇಲ್ವಿಚಾರಕರು ಹಾಗೂ ಮೇಲ್ವಿಚಾರಕ ಶ್ರೇಣಿಯ ಕಾರ್ಯಕರ್ತರು, ಸಿ.ಎಸ್.ಸಿ ಸೇವಾದಾರರು, ತಾಲೂಕಿನ 55 ಒಕ್ಕೂಟದ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# "ಶ್ರೇಷ್ಠ ತೋಟಗಾರಿಕೆ ರೈತ / ರೈತ ಮಹಿಳೆ ಪ್ರಶಸ್ತಿಗೆ ಅರ್ಜಿ ಆಹ್ವಾನ"

**ಮೂಡಲಗಿ :** ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದಲ್ಲಿ ಡಿಸೆಂಬರ್ 21 ರಿಂದ 23 2024ರವರೆಗೆ "ಆರ್ಥಿಕತೆ ಮತ್ತು ಪೌಷ್ಟಿಕತೆಗಾಗಿ ತೋಟಗಾರಿಕೆ" ಎಂಬ ಧ್ಯೇಯದೊಂದಿಗೆ ತೋಟಗಾರಿಕೆ ಮೇಳವನ್ನು ಮುಖ್ಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಸದರಿ ತೋಟಗಾರಿಕೆ ಮೇಳದಲ್ಲಿ ತೋಟಗಾರಿಕೆ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ವಿಶಿಷ್ಠ ಕೃಷಿಕರಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯದ 24 ಜಿಲ್ಲೆಗಳಿಗೆ ಪ್ರತಿಯೊಂದು ಜಿಲ್ಲೆಗೆ ಒಬ್ಬ ಶ್ರೇಷ್ಠ ತೋಟಗಾರಿಕೆ ರೈತ ಅಥವಾ ರೈತ ಮಹಿಳೆಯನ್ನು ಆಯ್ಕೆ ಮಾಡಿ ಸೂಕ್ತ ಬಹುಮಾನದೊಂದಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವದು.

ಈ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಲು ಬಯಸುವ ಬೆಳಗಾವಿ ಜಿಲ್ಲೆಯ ರೈತ/ರೈತ ಮಹಿಳೆಯರು ಅರ್ಜಿ ನಮೂನೆಯನ್ನು ಡೀನ್ ಕಛೇರಿ, ಕಿತ್ತೂರ ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯ, ಅರಭಾವಿ ಅಥವಾ ವಿಸ್ತರಣಾ ಮುಂದಾಳು, ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕ, ಅರಭಾವಿಯಲ್ಲಿ ಪಡೆಯಬಹುದು. ಅಥವಾ ತೋವಿವಿಯ ವೆಬ್‌ಸೈಟ್: www.uhsbagalkot.karnataka.gov.in ಮೂಲಕ ಕೂಡ ಪಡೆದುಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ 5ನೇ ನವೆಂಬರ್ 2024ರ ಒಳಗಾಗಿ ಡೀನ್, ಕಿತ್ತೂರ ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯ, ಅರಭಾವಿ ಇವರಿಗೆ ಸಲ್ಲಿಸುವುದು.

**ನಿಬಂಧನೆಗಳು :**

ಅರ್ಜಿದಾರರರು ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದ ಯಾವುದೇ ಕೃಷಿ/ತೋಟಗಾರಿಕೆ/ಪಶು ಸಂಗೋಪನೆ ಮತ್ತು ಐಸಿಎಆರ್ ಪ್ರಶಸ್ತಿಗಳನ್ನು ತಮ್ಮ ಹಾಗೂ ತಮ್ಮ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಪಡೆದಿರಬಾರದು. ಅರ್ಜಿದಾರರು ನಿಗದಿತ ಅರ್ಜಿ ನಮೂನೆಯಲ್ಲಿ ಸಂಪೂರ್ಣ ವಿವರಗಳನ್ನು ಒಳಗೊಂಡ ಮಾಹಿತಿಯನ್ನು ನೀಡಬೇಕು. ಸಲ್ಲಿಕೆಯಾದ ಅರ್ಜಿಗಳನ್ನು ಆಯ್ಕೆ ಸಮಿತಿಯು ಪರಿಶೀಲಿಸಿ ಕಿರುಪಟ್ಟಿ ಮಾಡಿದ ಮೂರು ಕ್ಷೇತ್ರಗಳಿಗೆ ಮಾತ್ರ ಕ್ಷೇತ್ರವೀಕ್ಷಣೆ ಕೈಗೊಳ್ಳಲಾಗುವುದು. ಆಯ್ಕೆಯು ವಿಶ್ವವಿದ್ಯಾಲಯದ ನಿಯಮ ಹಾಗೂ ಆಯ್ಕೆ ಸಮಿತಿಯ ನಿರ್ಧಾರಕ್ಕೆ ಒಳಪಟ್ಟಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಅರಭಾವಿಯ ಕಿ.ರಾ.ಚ.ತೋ. ಮಹಾವಿದ್ಯಾಲಯದ ವಿಸ್ತರಣಾ ಮುಂದಾಳು, ಡಾ. ಎ. ಎಮ್. ನದಾಫ್, ಮೋ.ಸಂ. (8660834191), ಇವರಿಗೆ ಸಂಪರ್ಕಿಸಬಹುದು.

# ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಜನರ ಕುಂದುಕೊರತೆ ನಿವಾರಣಾ ಸಭೆ

**ಕೃಷ್ಣರಾಜಪೇಟೆ :** ಪಟ್ಟಣದ ಹೊರ ವಲಯದ ಚಿಕ್ಕೋನಹಳ್ಳಿ ರೇಷ್ಮೆ ತರಭೇತಿ ಸಂಸ್ಥೆಯ ಸಭಾಂಗಣದಲ್ಲಿ ಶಾಸಕ ಹೆಚ್.ಟಿ.ಮಂಜು ಅವರ ಅಧ್ಯಕ್ಷತೆಯಲ್ಲಿ ನಡೆಯಿತು

ಕೃಷ್ಣರಾಜಪೇಟೆ ತಾಲೂಕಿನಾದ್ಯಂತ ದಲಿತರ ಮೇಲೆ ದಬ್ಬಾಳಿಕೆ ಹಾಗೂ ದೌರ್ಜನ್ಯ ಪ್ರಕರಣಗಳು ನಿರಂತರವಾಗಿ ನಡೆಯುತ್ತಿವೆ. ಮೇಲ್ವರ್ಗದ ಜನರು ದಲಿತರ ಮೇಲೆ ದಬ್ಬಾಳಿಕೆ ನಡೆಸುತ್ತಿರುವ ಬಗ್ಗೆ ಪೊಲೀಸರಿಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ, ದಲಿತ ಕೇರಿಗಳಲ್ಲಿ ಹಾಗೂ ಗೂಡಂಗಡಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಲಾಗುತ್ತಿದೆ. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಪುರಸಭೆ ಸದಸ್ಯ ಡಿ. ಪ್ರೇಮಕುಮಾರ್ ಹಾಗೂ ಛಲವಾದಿ ಮಹಾಸಭಾ ಜಿಲ್ಲಾಧ್ಯಕ್ಷ ಮಾಂಬಳ್ಳಿ ಜಯರಾಮ್ ಆಗ್ರಹಿಸಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದು 78 ವರ್ಷಗಳು ಕಳೆಯುತ್ತಿದ್ದರೂ ಸಂವಿಧಾನದ ಆಶಯಗಳು ಇಂದಿಗೂ ಈಡೇರಿಲ್ಲಾ, ಸಾಮಾಜಿಕ ನ್ಯಾಯದ ಅಡಿಯಲ್ಲಿ ಅಧಿಕಾರಿಗಳು ಕೆಲಸ ಮಾಡಿ ದಲಿತರ ಸ್ವಾಭಿಮಾನವನ್ನು ಎತ್ತಿ ಹಿಡಿಯುವ ದಿಕ್ಕಿನಲ್ಲಿ ಬದ್ಧತೆಯಿಂದ ಕೆಲಸ ಮಾಡಬೇಕು ಎಂದು ಶಾಸಕ ಮಂಜು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ತಹಸೀಲ್ದಾರ್ ಕರ್ನಲ್ ಡಾ. ಅಶೋಕ್, ತಾಲೂಕು ಸಮಾಜ ಕಲ್ಯಾಣಾಧಿಕಾರಿ ದಿವಾಕರ್, ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಸುಷ್ಮಾ, ಸಬ್ ಇನ್ಸ್ಪೆಕ್ಟರ್ ಸುಬ್ಬಯ್ಯ,

ತಾಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿ ವೆಂಕಟೇಶ್, ಸಿಡಿಪಿಓ ಅರುಣ್ ಕುಮಾರ್ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ದಲಿತಪರ ಸಂಘಟನೆಗಳ ಮುಖಂಡರು ಚರ್ಚೆಯಲ್ಲಿ ಭಾಗವಹಿಸಿದ್ದರು.

**ವರದಿ. ಎಸ್ ರವಿ ಹೊನ್ನೇನಹಳ್ಳಿ**

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State